ಅಚಲ

ತಿಂಗಳ ಪತ್ರಿಕೆ

ಬಿಡಿಪ್ರತಿ : 4 ರೂ.

ಜನವರಿ - 2005

ಒಳಗೇನಿದೆ

ಜಾಗೃತಿ ಮಹಿಳಾ ಅಧ್ಯಯನ ಕೇಂದ್ರ,
ಬೆಂಗಳೂರು

ಅಚಲ

ಸಂಪುಟ – 20 ಸಂಚಿಕೆ : 1

ಸಂಪಾದಕ ಮಂಡಲಿ

ಎನ್. ಗಾಯತ್ರಿ
ನೇಮಿಚಂದ್ರ, ದೇವಿ,
ಶಾಂತಾ ನಾಗರಾಜ್
ಹೆಚ್. ಎಸ್. ಗೀತಾ
ಹೇಮಲತಾ ಮಹಿಷಿ

ಪ್ರಕಾಶಕರು
ಜಾಗೃತಿ ಮಹಿಳಾ ಅಧ್ಯಯನ ಕೇಂದ್ರ
ಬೆಂಗಳೂರು

ಚಂದಾ ಹಣವನ್ನು ಚೆಕ್‌ನಲ್ಲಿ ಕಳುಹಿಸುವವರು ರೂ. 10/- ಬ್ಯಾಂಕ್ ಕಮೀಷನ್ ಸೇರಿಸಿ ಕಳುಹಿಸಬೇಕು. ಎಂ. ಓ. ಫಾರ್ಮಿನ ಕೊನೆಯ ಭಾಗದಲ್ಲಿ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ನಮೂದಿಸಬೇಕು. ಬದಲಾದ ವಿಳಾಸವನ್ನು ದಯವಿಟ್ಟು ಬರೆದು ತಿಳಿಸಿ.

Achala - Edited by
Dr. N. Gayathri

Published by
Dr. G. Ramakrishna on
behalf of Jagruthi Mahila
Adhyayana Kendra

Printed at
Lipi Mudrana
Bangalore - 560 004

ಆತ್ಮೀಯರೆ,

ಹೊಸ ವರ್ಷ ಬಂದಿದೆ. ಸುನಾಮಿಯ ರೂಪದಲ್ಲಿ ಬಂದ ಪ್ರಕೃತಿಯ ಅಟ್ಟಹಾಸ ಭವಿಷ್ಯತ್ತಿನ ಭೀಕರತೆಯನ್ನು ಕಣ್ಣಿಗೆ ರಾಚುವಂತೆ ಮಾಡಿ ಹೊಸ' ಸವಾಲುಗಳನ್ನು ನಮ್ಮ ಮುಂದಿಟ್ಟಿದೆ. ಪ್ರಕೃತಿಯ ವಿನಾಶಕಾರಿ ಶಕ್ತಿಯೆದುರು ಮನುಷ್ಯ ಎಷ್ಟೊಂದು ನಿಸ್ಸಹಾಯಕ ಎಂಬುದನ್ನು ಸಾಬೀತುಪಡಿಸಿದೆ. ಇಷ್ಟೆಲ್ಲ ಅವಘಡಗಳೂ ಮನುಷ್ಯನ ಅಹಂಗೆ ಪೆಟ್ಟು ಕೊಡದಿದ್ದರೆ ಮತ್ತೇನು ಪಾಠವನ್ನು ಪ್ರಕೃತಿಯಿಂದ ಮನುಷ್ಯ ಕಲಿಯಲು ಸಾಧ್ಯ ? ಸುನಾಮಿಯಿಂದ ಸಂತ್ರಸ್ತರಾದ ಜನತೆಯ ಸಹಾಯದ ಮಹಾಪೂರ ಎಲ್ಲ ಕಡೆಯಿಂದಲೂ ಹರಿದು ಬಂದಿರುವುದು ಮನುಷ್ಯನಲ್ಲಿನ ಮಾನವೀಯತೆಯ ಬಗ್ಗೆ ಭರವಸೆ ಹುಟ್ಟಿಸುತ್ತದೆ. ವಿದೇಶಿ ಸರ್ಕಾರಗಳ ನೆರವಿಲ್ಲದೆಯೂ ನಮ್ಮ ಹಿತವನ್ನು ನಾವು ಕಾಯ್ದುಕೊಳ್ಳಬಲ್ಲೆವು, ಎಂದು ಜಗತ್ತಿಗೆ ಭಾರತ ತೋರಿಸಿರುವುದು ಅಭಿನಂದನೀಯವಾದರೂ, ನಮ್ಮ ದೇಶದ ವಿವೇಕದ ಬಗ್ಗೆ ನಮಗೆ ಅನುಮಾನ ಮೂಡಿಸುವ ಘಟನೆಗಳು ನಮ್ಮ ನಡುವೆ ನಡೆಯುತ್ತವೆ. ಬೆನ್‌ಹಿನ್‌ನ ಮೂಲಕ ಭಾರತಕ್ಕೆ ಹಿತವನ್ನು ಕೋರುವ ಕಾರ್ಯಕ್ರಮ ಏರ್ಪಡಿಸಿರುವ ಸಂಘಟಕರು ಅದೇ ಹಣವನ್ನು ಸುನಾಮಿ ಸಂತ್ರಸ್ತರ ಪುನರ್ವ್ಯವಸ್ಥೆಗೆ ಬಳಕೆ ಮಾಡಿದ್ದರೆ ಅದರಿಂದ ಭಾರತಕ್ಕೆ ಒಳಿತಾಗುತ್ತಿರಲಿಲ್ಲವೇ ? ಇದನ್ನು ಪ್ರತಿಭಟಿಸಿ ತಮ್ಮ ಹಿಂದುತ್ವದ ಶ್ರೇಷ್ಠತೆಯನ್ನು ಮೆರೆದ ಕೋಮುವಾದಿಗಳು ಕೋಟ್ಯಾಂತರ ರೂಪಾಯಿಗಳ ನಷ್ಟಕ್ಕೆ ಕಾರಣವಾಗಿರುವ ವಿವೇಕಕ್ಕೆ ಏನನ್ನಬೇಕು ? ಇಂತಹ ಮತಿಭ್ರಷ್ಟ ಘಟನೆಗಳು ಮರುಕಳಿಸದಂತೆ ಹೊಸವರ್ಷ ಹೊಸಭರವಸೆಗಳನ್ನು ಹುಟ್ಟುಹಾಕಲಿ ಎಂದು ಹಾರೈಸುತ್ತೇವೆ.

ಅಚಲ ವಿಳಾಸ

108, ಸ್ಕೈಲೈನ್ ಸುರಭಿ, 14-ಪಿ, ವಿದ್ಯಾಪೀಠ ರಸ್ತೆ
ಬನಶಂಕರಿ 3ನೇ ಹಂತ, ಬೆಂಗಳೂರು – 560 085

ಸಂಪಾದಕೀಯ

ಪೆಣ್ಣು ಪೆಣ್ಣೆಂದೇಕೆ ಬೀಳುಗಳೆವರು....

ಪುತ್ರನ ಜನನಕ್ಕೆ ಭಾರತೀಯ ಸಂಸ್ಕೃತಿಯಲ್ಲಿ ಇರುವಷ್ಟು ಪ್ರಾಶಸ್ತ್ಯ ಮತ್ತೆಲ್ಲಿಯೂ ಇಲ್ಲ. ಋಗ್ವೇದದಲ್ಲಿಯೇ ಪುತ್ರನ ಹುಟ್ಟಿಗೆ ವಿಶೇಷ ಪ್ರಾರ್ಥನೆ ನಡೆಸುವುದರ ಉಲ್ಲೇಖವಿದೆ. ಪಿತೃಗಳಿಗೆ ಪಿಂಡವನ್ನಿಡುವ ಅಧಿಕಾರವನ್ನು ಪುತ್ರನಿಗೆ ಮಾತ್ರ ಕೊಟ್ಟಿದ್ದರಿಂದ ಅವನ ಹುಟ್ಟಿಗೆ ಪ್ರಾಶಸ್ತ್ಯ ಸಿಕ್ಕಿತು. ಪಾಪಪುಣ್ಯಗಳ ಕಲ್ಪನೆ, ಸ್ವರ್ಗ ನರಕದ ಕಲ್ಪನೆ ಜನರ ಮನಸ್ಸಿನಲ್ಲಿ ಹೆಚ್ಚಿದಷ್ಟು ಮಗ ಹೆಚ್ಚು ಮುಖ್ಯವಾಗಿ ಗೋಚರಿಸಿದ. ಅವನು ಮುಕ್ತಿ ಮಾರ್ಗಕ್ಕೆ ಕರೆದೊಯ್ಯುವ ನಾವೆಯಾದ. ಪುರಾಣೇತಿಹಾಸಗಳಲ್ಲಿ ಹೆಣ್ಣು ಕೂಸನ್ನು ಅನಾದರದಿಂದ ಕಂಡಿರುವ ಸಂಗತಿಗಳಿವೆ. ಅಥರ್ವವೇದದ ಐದನೆಯ ಅಧ್ಯಾಯದಲ್ಲಿ ಹೆಣ್ಣು ಮಗು ಬೇಡವೆಂದು ಪ್ರಾರ್ಥಿಸುವ ಶ್ಲೋಕಗಳಿವೆ. ಹೆಣ್ಣು ಮಗುವನ್ನು ಬೇರೆಲ್ಲಿಯಾದರೂ ಹುಟ್ಟಿಸಲಿ, ನನಗೆ ಮಾತ್ರ ಗಂಡು ಮಗುವನ್ನೇ ದಯಪಾಲಿಸಲಿ ಎಂಬ ಅರ್ಥ ಬರುವ ಸಾಲುಗಳವು. ಇದೇ ಗ್ರಂಥದ ಆರನೆಯ ಅಧ್ಯಾಯದಲ್ಲಿ ಗರ್ಭ ಹೊತ್ತ ತಾಯಿಯ ರಕ್ಷಣೆಗೆಂದೇ ವಿಶೇಷ ಆಚರಣೆಯನ್ನು ಹೇಳಲಾಗಿದೆ. ತಾಯಿಯ ಗರ್ಭದಲ್ಲಿರುವ ಗಂಡು ಮಗುವನ್ನು ದುಷ್ಟ ಶಕ್ತಿಗಳು ಹೆಣ್ಣಾಗಿ ಪರಿವರ್ತಿಸದಿರಲಿ ಎಂದೇ ಪ್ರಾರ್ಥನೆಯನ್ನು ಮಾಡಲಾಗುತ್ತದೆ.

ಐತರೇಯ ಬ್ರಾಹ್ಮಣದಲ್ಲಿ ಹೆಣ್ಣು ಶಿಶುವಿನ ಜನನವನ್ನು ತಡೆಯಲೆಂದೇ ವಿಶೇಷ ಪೂಜಾವಿಧಿಗಳನ್ನು ಹೇಳಲಾಗಿದೆ. ತೈತ್ತಿರೀಯ ಸಂಹಿತೆಯಲ್ಲಿ ವಿವರಿಸಲಾದ ಮತ್ತೊಂದು ಯಾಗದ ಕ್ರಿಯೆಯನ್ನು ಅಮಾವಾಸ್ಯೆ ಹಾಗೂ ಹುಣ್ಣಿಮೆಯ ದಿನದಂದು ನಡೆಸಬೇಕೆಂದು ಸೂಚಿಸಲಾಗಿದೆ. ಹೆಣ್ಣು ಮಗುವಿನ ಜನನವನ್ನು ತಡೆಯುವುದೇ ಈ ಆಚರಣೆಯ ಉದ್ದೇಶ. ಹೆಣ್ಣಿನ ಹುಟ್ಟನ್ನು ಇಷ್ಟೊಂದು ಪ್ರಬಲವಾಗಿ ವಿರೋಧಿಸುವ ಶಾಸ್ತ್ರಗ್ರಂಥಗಳು ಸಮಾಜದ ಪ್ರತಿಷ್ಠಿತರ ಅಭಿಪ್ರಾಯವನ್ನು ಮಂಡಿಸಿವೆ. ಆದರೆ ಜನಸಾಮಾನ್ಯರ ಅಭಿಪ್ರಾಯವೇನೂ ಇದಕ್ಕಿಂತ ಭಿನ್ನವಾಗಿಲ್ಲ. ''ಬಾಲಕರಿಲ್ಲದ ಜನ್ಮ ಬಾಲಿದ್ಯಾತರ ಜನ್ಮ, ಬಾಡಿಗೆ ಎತ್ತು ದುಡಿದ್ಹಂಗ, ಬಾಳೆಲೆಯ ಹಾಸುಂಡು ಬೀಸಿ ಒಗೆದ್ಹಾಂಗ'' ಎಂಬ ಜನಪದದ ನುಡಿ ಸಮಾಜದ ಒಟ್ಟಭಿಪ್ರಾಯವನ್ನು ಸಂಗ್ರಹವಾಗಿ ನುಡಿಯುತ್ತದೆ.

ಆಧುನಿಕ ಯುಗದಲ್ಲೂ ಗಂಡು ಮಗನ ಹುಟ್ಟಿಗಿರುವ ಪ್ರಾಮುಖ್ಯತೆ ಕಡಿಮೆಯಾಗಿಲ್ಲ. ವಿದ್ಯಾವಂತ ಮಂದಿ ಕೂಡ ಗಂಡು-ಹೆಣ್ಣು ಎಂಬ ಪದಗಳನ್ನು ಲಾಭ-ನಷ್ಟಗಳೆಂಬುದಕ್ಕೆ ಸಂಕೇತ ಪದಗಳನ್ನಾಗಿ ಬಳಸುವುದುಂಟು. ಹುಟ್ಟಿದ ಮಗನಿಗೆ ವಿದ್ಯಾಭ್ಯಾಸ ಕೊಡಿಸಿ, ಅದಕ್ಕೆ ಖರ್ಚು ಮಾಡಿರುವಷ್ಟು ಹಣವನ್ನು ವರದಕ್ಷಿಣೆಯಾಗಿ ಪಡೆದು ಮುಪ್ಪಿನ ಕಾಲದಲ್ಲಿ ತಮ್ಮೊಂದಿಗೆ ಉಳಿಯಬಹುದಾದ ಮಗುವನ್ನು ಹೆತ್ತೊಡಲು ಲಾಭವೆಂದೇ ಪರಿಗಣಿಸುತ್ತದೆ. ಮಗಳಿಗೆ ವಿದ್ಯಾಭ್ಯಾಸ ಕೊಡಿಸಿ, ಉದ್ಯೋಗ ದೊರೆತರೂ ವಿವಾಹದ ಖರ್ಚು, ವರದಕ್ಷಿಣೆಯ ಖರ್ಚನ್ನು ಸರಿತೂಗಿಸಿ ಮುಂದೆ ಮಗಳಿಗಾಗಬಹುದಾದ ಎಲ್ಲ ತಾಪತ್ರಯಗಳಿಗೂ ಒದ್ದಾಡಬೇಕಾದ ಪೋಷಕರು ಸಹಜವಾಗಿಯೇ ಹೆಣ್ಣು ಮಗುವನ್ನು ಆಶಿಸುವುದಿಲ್ಲ.

ಹೀಗೆ ನಮ್ಮ ಚರಿತ್ರೆಯನ್ನು ಅವಲೋಕಿಸಿದಾಗ ಹೆಣ್ಣು ಮಗು ಬೇಡವೆಂದು ಗಂಡು ಮಗುವನ್ನು ಆಶಿಸಿದ ನಮ್ಮ ಪ್ರಾಚೀನರು ಅದಕ್ಕಾಗಿ ಪೂಜೆ, ಹೋಮಗಳನ್ನು ಮಾಡಿದ್ದು ಅವರ ಆಶಯಗಳನ್ನು ಹೆಚ್ಚು ಸ್ಪಷ್ಟಪಡಿಸುತ್ತದೆ. ಇಂದು ಕಾಲ ಬದಲಾಗಿದೆ. ವಿಜ್ಞಾನದಲ್ಲಿ ಅಪಾರವಾದ ಬೆಳವಣಿಗೆಯಾಗಿದೆ. ಪುತ್ರಾಕಾಂಕ್ಷಿಯಾದ ಇಂದಿನ ದಂಪತಿಗಳು ಹಿಂದಿನವರಂತೆ ಪೂಜೆ, ಹೋಮ, ಹವನಗಳನ್ನು ಮಾಡದಿರಬಹುದು. ಅಥವಾ ಮಾಡಿದರೂ ಅದರ ಜೊತೆಗೆ ವಿಜ್ಞಾನದ ಸಹಾಯ ಪಡೆದು ಗಂಡು ಮಗುವನ್ನು ಪಡೆಯಲು ಪ್ರಯತ್ನಿಸಿ ಕೆಲವೊಮ್ಮೆ ಸಫಲರಾಗಿರುವುದನ್ನು ಕಾಣಬಹುದಾಗಿದೆ. ಇದನ್ನು ವಿಜ್ಞಾನದ ಸಾಧನೆಯೆನ್ನಬೇಕೋ ಅಥವಾ ಮನುಷ್ಯತ್ವದ ಅಧಃಪತನವೆನ್ನಬೇಕೋ ?

ಭಾರತ ಸರ್ಕಾರವು ಕುಟುಂಬ ಯೋಜನೆಯನ್ನು ರಾಷ್ಟ್ರೀಯ ಕಾರ್ಯಕ್ರಮವನ್ನಾಗಿ ಮಾಡಿಕೊಳ್ಳುವ ಮುನ್ನ ಭಾರತದ ಕಾನೂನು ಗರ್ಭಪಾತವನ್ನು ಅಪರಾಧವೆಂದು ಪರಿಗಣಿಸಿತ್ತು. ಗರ್ಭಪಾತ ಮಾಡುವುದು ಮತ್ತು ಗರ್ಭದಲ್ಲಿರುವ ಶಿಶುವಿಗೆ ಯಾವುದೇ ರೀತಿಯ ತೊಂದರೆ ಕೊಡುವುದು ಇಂಡಿಯನ್ ಪೀನಲ್ ಕೋಡ್ ಪ್ರಕಾರ ಅಪರಾಧವಾಗಿತ್ತು. ಆದರೆ 1971ರಲ್ಲಿ ವೈದ್ಯಕೀಯವಾಗಿ ಗರ್ಭವನ್ನು ನಿವಾರಿಸುವ ಕಾಯಿದೆಯನ್ನು ಸಂಸತ್ತು ಮಾಡಿತು. ಈ ಕಾನೂನಿನ ಉದ್ದೇಶ ಒಳ್ಳೆಯದೇ ಆದರೂ ಈ ಕಾನೂನಿನ ಲಾಭ ಪಡೆದುಕೊಂಡು ಅಮ್ನಿಯೋಸೆಂಟೆಸಿಸ್ ಪರೀಕ್ಷೆಗೆ ಗರ್ಭಿಣಿಯನ್ನು ಒಳಪಡಿಸಿ ಲಿಂಗ ನಿರ್ಣಯವಾದ ಮೇಲೆ ಸ್ತ್ರೀ ಭ್ರೂಣಹತ್ಯೆ ಮಾಡಲು ಈ ಕಾನೂನಿನ ಬಳಕೆಯಾಗುತ್ತಿರುವುದು ಮತ್ತು ಈ ಸ್ತ್ರೀ ಭ್ರೂಣಹತ್ಯೆಯಿಂದಾಗಿ ಇಂದು ಸ್ತ್ರೀ ಪುರುಷರ ಅನುಪಾತದಲ್ಲಿ ಸಾಕಷ್ಟು ಇಳಿಮುಖವಾಗಿದ್ದು ಸಮಾಜದ ಸ್ವಾಸ್ಥ್ಯಕ್ಕೆ ಆತಂಕ ತಂದಿದೆ. ವೈಜ್ಞಾನಿಕ ಪ್ರಗತಿಯು ಇಂದು ಹೊಸ ಹೊಸ ಅನ್ವೇಷಣೆಗಳೊಂದಿಗೆ ಹೆಣ್ಣಿನ ಜೀವಕ್ಕೆ ಗಂಡಾಂತರ ತಂದಿದೆ. 'ಇನ್-ವಿಟೊ' ಗರ್ಭದಾನದಿಂದ ಬೇಕಾದ ಲಿಂಗದ ಮಗುವನ್ನು ಆಯ್ದುಕೊಳ್ಳುವುದು ಈ ಸಮಸ್ಯೆಯ ಗಂಭೀರತೆಯನ್ನು ಹೆಚ್ಚಿಸುತ್ತದೆ.

ಅಮ್ನಿಯೋಸೆಂಟೆಸಿಸ್ ಮತ್ತು ಸ್ತ್ರೀ ಭ್ರೂಣಹತ್ಯೆ ವೈದ್ಯಕೀಯ ಜಗತ್ತಿನ ಸಮಸ್ಯೆಯಂತೆ ಕಂಡರೂ ಇದಕ್ಕೆ ಇರುವ ಸಾಮಾಜಿಕ, ಆರ್ಥಿಕ ಆಯಾಮಗಳು ಸಮಸ್ಯೆಯನ್ನು ಹೆಚ್ಚು ಜಟಿಲಗೊಳಿಸಿವೆ. ಎಲ್ಲಿಯವರೆಗೆ ಗಂಡುಮಕ್ಕಳು ಬೇಕೆಂಬ ಹಾಹಾಕಾರ ನಿಲ್ಲುವುದಿಲ್ಲವೋ, ಸಮಾಜವು ಹೆಣ್ಣನ್ನು ನೋಡುವ ದೃಷ್ಟಿ ಬದಲಾಗುವುದಿಲ್ಲವೋ ಅಲ್ಲಿಯವರೆಗೆ ಗಂಡು ಬೇಕೆಂದು ಕಾಯುತ್ತಾ ಹೆಣ್ಣು ಮಕ್ಕಳನ್ನು ತಾತ್ಸಾರದಿಂದ ಕಾಣುವ ತಂದೆ-ತಾಯಿಯರ ಸಂಖ್ಯೆ ಕಡಿಮೆಯಾಗುವುದಿಲ್ಲ. ಹಾಗೂ ಹೆಣ್ಣಿನ ಶೋಷಣೆ ನಿಲ್ಲುವುದಿಲ್ಲ.

— ಎನ್. ಗಾಯತ್ರಿ

"ಸ್ತ್ರೀ ಭ್ರೂಣ ಹತ್ಯೆ" – ವೈದ್ಯಕೀಯ ಆಯಾಮಗಳು

-ಡಾ|| ಎಚ್.ಆರ್. ನಂದಿನೀದೇವಿ

ಸ್ತ್ರೀ ಭ್ರೂಣಹತ್ಯೆ ಮನುಕುಲಕ್ಕೆ ಒಂದು ಶಾಪ, ಪೀಡೆ. ಇದನ್ನು ನಾವು ಒಂದು ಸಂವಾದಕ್ಕೆ / ಚರ್ಚೆಗೆ / ಲೇಖನಕ್ಕೆ ವಿಷಯವಾಗಿ ತೆಗೆದುಕೊಳ್ಳುವುದು ಕೂಡ ನೋವಿನ ಸಂಗತಿ. ಆದರೂ ವೈದ್ಯಕೀಯ ದೃಷ್ಟಿಯಿಂದ ಈ ಲೇಖನದಲ್ಲಿ ಕೆಲವು ವಿಚಾರಗಳನ್ನು ಸ್ಪಷ್ಟೀಕರಿಸಬೇಕಾಗಿದೆ. ಅವನ್ನೆಲ್ಲಾ ಒಂದೊಂದಾಗಿ ಪರಿಶೀಲಿಸೋಣ.

ಬಹಳಷ್ಟು ಸಂದರ್ಭಗಳಲ್ಲಿ ಹೆಣ್ಣು ಮಗುವಿನ ಜನನವಾದಾಗ ಆ ಮಗುವಿನ ತಾಯಿಯನ್ನು ಗಂಡನ ಮನೆಕಡೆಯವರೂ ಹಾಗೂ ಗಂಡನೂ ಕೂಡ ದೂಷಿಸುವುದನ್ನು ನಾವು ಕಾಣುತ್ತೇವೆ. ವೈಜ್ಞಾನಿಕವಾಗಿ ಇದನ್ನು ಪರಿಶೀಲಿಸಿದಾಗ, "ಗಂಡನೇ" ಮಗುವಿನ ಲಿಂಗ ನಿರ್ಧಾರಕನೆಂಬುದು ತಿಳಿಯುತ್ತದೆ. ಒಂದು ಮಗುವಾಗ ಬೇಕಾದರೆ ಅಂಡಾಣು, ವೀರ್ಯಾಣುಗಳು ಸಂಧಿಸಿ ಭ್ರೂಣವುಂಟಾಗುತ್ತದೆ.

ಒಂದು ಹೆಣ್ಣಿನ ಅಂಡಾಣುವಿನಲ್ಲಿ ಯಾವಾಗಲೂ X ಜೀವಕೋಶವೇ ಇರುವುದು. ಆದರೆ ಒಂದು ಗಂಡಿನ ವೀರ್ಯಾಣುವಿನಲ್ಲಿ X ಜೀವಕೋಶವಾದರೂ ಇರಬಹುದು ಅಥವಾ Y ಜೀವಕೋಶವಾದರೂ ಇರಬಹುದು. X ವೀರ್ಯಾಣು ಅಂಡಾಣುವಿನೊಂದಿಗೆ ಕೂಡಿದಾಗ XX ಹೆಣ್ಣು ಭ್ರೂಣವೂ, Y ವೀರ್ಯಾಣು ಅಂಡಾಣುವಿನೊಂದಿಗೆ ಕೂಡಿದಾಗ XY ಗಂಡು ಭ್ರೂಣವೂ ಉತ್ಪತ್ತಿಯಾಗುತ್ತದೆ. ಈಗ ಹೇಳಿ ಯಾರು ಲಿಂಗ ನಿರ್ಧಾರಕರೆಂದು ? ಹೆಣ್ಣನ್ನು ದೂಷಿಸುವುದು ಆಧಾರರಹಿತ ಹಾಗೂ ಮೌಢ್ಯ.

ಹೀಗೆ ಹೆಣ್ಣು ಮಗುವಿನ ಸಂತತಿ ಕಡಿಮೆಯಾಗಿ, ಗಂಡಿನ ಸಂತತಿ ಹೆಚ್ಚಾದಲ್ಲಿ, ಗಂಡು ಮಗುವಿಗೆ ಬರತಕ್ಕಂತಹ X-Chromosome ಅವಲಂಬಿತ ವಂಶವಾಹಕ ಕಾಯಿಲೆಗಳು ಸಮಾಜದಲ್ಲಿ ಸಾಪೇಕ್ಷವಾಗಿ ಜಾಸ್ತಿಯಾಗುತ್ತವೆ. ಉದಾಹರಣೆಗೆ - ಹೀಮೋಫೀಲಿಯಾ ಖಾಯಿಲೆ.

ಈ ರೀತಿ ಗಂಡು ಹೆಣ್ಣಿನ ಅನುಪಾತವು ಏರುಪೇರಾದಲ್ಲಿ ಮುಂದೆ ಏನಾಗಬಹುದು ಎಂದು ಆಲೋಚಿಸಿ –

1) ಗಂಡುಗಳಿಗೆ ಮದುವೆಯಾಗಲು ಹೆಣ್ಣು ಸಿಗದೇ ಹೋಗಬಹುದು.

2) ಒಂದು ಹೆಣ್ಣು 4-5 ಗಂಡುಗಳನ್ನು ಹೊಂದಿ ಮಹಾಭಾರತದ ದ್ರೌಪದಿಯ ಕಥೆ ಪುನರಾವರ್ತನೆ ಯಾಗಬಹುದು.

3) ಮಾನಭಂಗ, ವಿವಾಹಪೂರ್ವ ಲೈಂಗಿಕತೆ, ವಿವಾಹೇತರ ಲೈಂಗಿಕ ಸಂದರ್ಭಗಳು, ಅತ್ಯಾಚಾರ, ಅರಾಜಕತೆ, ಅನಾಚಾರಗಳು ಹೆಚ್ಚಾಗಬಹುದು.

4) ಈಗಾಗಲೇ ಹೆಚ್ಚುತ್ತಿರುವ ಲೈಂಗಿಕ ರೋಗಗಳು ಮತ್ತು AIDS ಇನ್ನೂ ಹೆಚ್ಚಾಗಬಹುದು.

ಅನೇಕ ಸ್ಕ್ಯಾನಿಂಗ್ ಕೇಂದ್ರಗಳಲ್ಲಿ ಗರ್ಭನಿಂತ 8 ವಾರಗಳಲ್ಲೇ ಭ್ರೂಣಲಿಂಗ ನಿರ್ಧಾರ ಮಾಡಿ ಗರ್ಭಪಾತ ಮಾಡಲಾಗುತ್ತಿದೆ. ಆದರೆ ಇದೆಷ್ಟರ ಮಟ್ಟಿಗೆ ಸರಿ ; ವಸ್ತುಸ್ಥಿತಿ ಏನು ಎಂದು ಗಂಭೀರವಾಗಿ ಆಲೋಚಿಸೋಣ....

ಭ್ರೂಣದ ಮೊದಲ ಹತ್ತು ವಾರಗಳ ತನಕ ಭ್ರೂಣಲಿಂಗ ಲಕ್ಷಣಗಳು ಅನಿರ್ಧಾರಿತವಾಗಿರುತ್ತದೆ. 10 ವಾರಗಳ ನಂತರವೇ ಲಿಂಗಲಕ್ಷಣಗಳು ನಿರ್ದಿಷ್ಟವಾಗಿ (ಬಾಹ್ಯವಾಗಿ) ರೂಪುಗೊಳ್ಳುವುವು. ಆದರೆ ಈ ಹತ್ತು ವಾರದ ಹಂತದಲ್ಲೂ, ಅದು ಎಷ್ಟು ಚಿಕ್ಕದಿರುವುದೆಂದರೆ, ಯಾವ ಸ್ಕ್ಯಾನಿಂಗ್ ವೈದ್ಯರಿಗೂ ಅದನ್ನು ಪತ್ತೆ ಮಾಡಲು ಸಾಧ್ಯವಿಲ್ಲ. 14 ವಾರಗಳ ಹೊತ್ತಿಗೆ ಬಾಹ್ಯಲಿಂಗ ಲಕ್ಷಣಗಳು ಸಾಕಷ್ಟು ಬೆಳೆದು, ಗುರುತಿಸುವಷ್ಟಾಗಿರುತ್ತದೆ. ಎಂತಹ ಪರಿಣತಿಯುಳ್ಳ ಸ್ಕ್ಯಾನಿಂಗ್ ತಜ್ಞರಿಗೂ ಕೂಡ ಖಚಿತವಾಗಿ ಭ್ರೂಣದ ಲಿಂಗವನ್ನು ತಿಳಿಯಬೇಕಾದರೆ ಕಡೇಪಕ್ಷ 14 ವಾರಗಳಾದರೂ ಆಗಿರಬೇಕು. ಆದರೆ ಜನಗಳ ಮಾನಸಿಕ ಸ್ಥಿತಿಗತಿಗಳನ್ನು ಸೂಕ್ಷ್ಮವಾಗಿ ಗಮನಿಸಿ, ವೈದ್ಯರು ವೈಯ್ಯಕ್ತಿಕ ಲಾಭಕ್ಕಾಗಿ, 6-8-10 ವಾರಗಳೊಳಗೆ ಲಿಂಗ ನಿರ್ಧಾರ ಮಾಡುವ ಸುಳ್ಳನ್ನು ಬಳಸಿಕೊಳ್ಳುತ್ತಿರುವುದು ಬಹಳ ವಿಷಾದನೀಯ. ಇದು ನಮ್ಮ ಸಮಾಜದ ನೈತಿಕ ಅಧಃಪತನಕ್ಕೆ ಕನ್ನಡಿಯಾಗಿದೆ.

ವೈದ್ಯರೂ ಕೂಡ ಈ ಸ್ತ್ರೀ ಭ್ರೂಣಹತ್ಯೆಯನ್ನು ತಡೆಗಟ್ಟಲು ಹೃತ್ಪೂರ್ವಕವಾದ ಪ್ರಯತ್ನವನ್ನು ಮಾಡ್ತಾ ಇಲ್ಲ. ಇದಕ್ಕೆ ಕಾರಣಗಳು ಹಲವಾರು. ತಾಯಂದಿರಿಗೆ ಹಾಗೂ ಸಂಬಧಪಟ್ಟವರಿಗೆ ಕೂಲಂಕುಷವಾಗಿ ಸ್ತ್ರೀ ಭ್ರೂಣಹತ್ಯೆ ತಪ್ಪು ಎಂದು ಮನವರಿಕೆ ಮಾಡಿಕೊಡಲು ಬಹಳಷ್ಟು ಸಮಯ ವ್ಯಯಿಸಬೇಕಾಗುತ್ತದೆ. ಸುದೀರ್ಘವಾದ PNDT Forms ಭರ್ತಿ ಮಾಡುವುದಕ್ಕೇನೆ ಬಹಳ ಸಮಯ ಖರ್ಚಾಗುತ್ತದೆ. ಸಮಯದ ಅಭಾವದಿಂದಾಗಿ ಹಲವಾರು ವೈದ್ಯರು ಈ ವಿಚಾರಧಾರೆಗೆ ಬದ್ಧರಾಗಿರುವುದಿಲ್ಲ. ಇಂತಹ ವೈದ್ಯರು ಕೆಲಸದ ಒತ್ತಡದ ನೆಪದಲ್ಲಿ ಸ್ತ್ರೀ ಭ್ರೂಣಹತ್ಯೆಗಾಗಿ ಬಂದ ತಂದೆತಾಯಿಯರ ಮನಃಪರಿವರ್ತನೆಗಾಗಿ ಪ್ರಯತ್ನವನ್ನೇ ಮಾಡುವುದಿಲ್ಲ.

ಪದೇ ಪದೇ ಗರ್ಭಪಾತ ಮಾಡಿಸಿಕೊಳ್ಳುವುದರಿಂದ ದೈಹಿಕವಾಗಿ ಹಾಗೂ ಮಾನಸಿಕವಾಗಿ ಒಂದು ಹೆಣ್ಣು ಅನಾರೋಗ್ಯದಿಂದ ಬಳಲುವ ಸಾಧ್ಯತೆ ಹೆಚ್ಚಾಗುವುದು. ಮುಂದಿನ ಸಂತಾನೋತ್ಪತ್ತಿಗೆ ತೊಂದರೆಯಾಗಿ ಬಂಜೆತನ ಕೂಡ

ಉಂಟಾಗಬಹುದು. ಅನೇಕ ವೇಳೆ ಸಾವು ಕೂಡ ಸಂಭವಿಸ ಬಹುದು. ಆರ್ಥಿಕವಾಗಿ ಕೂಡ ದುರ್ಬಲರಾಗಬಹುದು. ವಿಶೇಷವಾಗಿ ಮೊದಲನೇ ಬಾರಿ ಗರ್ಭವತಿಯಾದಾಗ ಸಂತೋಷಪಟ್ಟುಕೊಂಡು ಮನೋಲ್ಲಾಸದಿಂದ ವೈದ್ಯರ ಬಳಿಗೆ ಬಂದು ಯಾವುದೋ ಒಂದು ಕಾರಣಕ್ಕಾಗಿ ಆ ಗರ್ಭವನ್ನು ತೆಗೆಸಿಕೊಳ್ಳಬೇಕಾಗಿ ಬಂದಾಗ ಆಕೆಯ ಮನಸ್ಸಿನ ಮೇಲೆ ತೀವ್ರವಾದ ದುಷ್ಪರಿಣಾಮ ಉಂಟಾಗಬಹುದು. ಹತಾಶೆ ಮತ್ತು ಮಾನಸಿಕ ಅಸ್ವಸ್ಥತೆಯೂ ಕೂಡ ಆಗಬಹುದು.

ಸಂತಾನ ನಿಯಂತ್ರಣ ಸೂತ್ರಗಳನ್ನು ಪಾಲಿಸದೆ ಇರುವುದು ಬೇಜವಾಬ್ದಾರಿತನ. ಪಾಲಿಸಿಯೂ ಗರ್ಭ ನಿಂತರೆ ಅದನ್ನು ತೆಗೆಸಿಕೊಳ್ಳುವುದು ಕೆಲವರಿಗೆ ಅನಿವಾರ್ಯ. ಪಾಲಿಸದೆ ಗರ್ಭಪಾತ ಪದೇ ಪದೇ ಮಾಡಿಸಿಕೊಳ್ಳುವುದು ಅಪರಾಧ. ಅದರಲ್ಲೂ ಗಂಡೋ ಹೆಣ್ಣೋ ತಿಳಿದುಕೊಂಡು ಸ್ತ್ರೀ ಭ್ರೂಣವನ್ನು ಕೊಲ್ಲುವುದು ಅಕ್ಷಮ್ಯ ಅಪರಾಧ.

ಇವುಗಳನ್ನು ನಾವು ತಡೆಗಟ್ಟಬೇಕಾದರೆ, ಬರೀ ಕಾನೂನನ್ನು ಮಾಡಿಟ್ಟರೆ ಸಾಲದು. ಅದನ್ನು ಅನುಷ್ಠಾನಕ್ಕೆ ತರುವಲ್ಲಿ ಪ್ರಾಮಾಣಿಕವಾದ ಪ್ರಯತ್ನ ಆಗಬೇಕು. ಈ ಪ್ರಯತ್ನ ಪಾರದರ್ಶಕವಾಗಿರಬೇಕು. ಬೇರೆಲ್ಲಾ ಕಾನೂನುಗಳಂತೆ ಇದೂ ಒಂದು ಶೋಷಣೆಯ ಸಾಧನವಾಗಬಾರದು. ಪ್ರಾಮಾಣಿಕವಾಗಿ ಈ ವಿಚಾರಕ್ಕೆ ಬದ್ಧರಾಗಿ ಇದನ್ನು ಅನುಷ್ಠಾನಕ್ಕೆ ತರುವ ಉತ್ಸಾಹವುಳ್ಳ ವೈದ್ಯರಿಗೂ ಕೂಡ ಒಂದು PNDT Certificate ತೆಗೆದುಕೊಳ್ಳುವಲ್ಲಿ ಸಂಬಂಧಪಟ್ಟ ಅಧಿಕಾರಿಗಳಿಗೆ ಲಂಚ ತಿನ್ನಿಸಿ ಅವರ ಆಸೆಗಳನ್ನು ಪೂರೈಸುವಲ್ಲಿ ಹೈರಾಣಾಗುವ ಸಂದರ್ಭಗಳೇ ಹೆಚ್ಚು. ಈ PNDT Act ಪ್ರಕಾರ ಅವರು ಯಾವುದೇ ವೈದ್ಯರನ್ನು ಕೂಡ ಯಾವ ಆಧಾರವೂ ಇಲ್ಲದೆ ಬಾಯಿ ಹೇಳಿಕೆಯ ಮೇಲೆ ದಸ್ತಗಿರಿ ಮಾಡಬಹುದು. ತಾನು ತಪ್ಪಿತಸ್ಥನಲ್ಲ ಎಂದು ಸಮರ್ಥಿಸುವುದು ವೈದ್ಯರ ಹೊಣೆ. ಈ PNDT Actನಲ್ಲಿ subclauseಗಳು ಅರ್ಥವಾಗೊಲ್ಲ, ಯಾರ್‍ಯಾರಿಗೆ ಯಾವ ತರಹ Form ಭರ್ತಿಮಾಡಬೇಕೆನ್ನುವಲ್ಲಿ ಗೊಂದಲ, Feed back form ಯಾವ ರೀತಿ ಭರ್ತಿಮಾಡಬೇಕು ಎನ್ನುವಲ್ಲಿ ಸರಿಯಾದ ಮಾರ್ಗದರ್ಶನವಿಲ್ಲ, ಕಷ್ಟಕರವಾದ ಕೇಸುಗಳಲ್ಲಿ ಸ್ಕ್ಯಾನಿಂಗ್ ಗೈಡೆನ್ಸ್‌ನಿಂದ ಗರ್ಭಪಾತ ಮಾಡಬೇಕಾಗಬಹುದು. ಆಗ ವೈದ್ಯರಲ್ಲಿ ಈ ಸಂದರ್ಭಕ್ಕೆ ಸ್ಕ್ಯಾನಿಂಗ್ ಉಪಯೋಗಿಸಿದರೆ ತನಗೆಲ್ಲಿ ಆಪತ್ತು ಕಾದಿದೆಯೋ ಎಂಬ ಕಳವಳ – ಹೀಗೆ ನೂರೆಂಟು ಅನುಮಾನಗಳು, ಅಸಮಾಧಾನಕರ ಸೂತ್ರಗಳು. ಇನ್ನು ಆ PNDT Officeಗಂತೂ ಎಷ್ಟು ಕಾಗದ ಬರೆದರೂ (ಅದೂ Registered Post ನಲ್ಲಿ) ಕೂಡ ಅವರಿಂದ ಒಂದೂ ಉತ್ತರವಿಲ್ಲ. Acknowledgement ಬಂದರೆ ಅದನ್ನು ನಿಧಿಯಂತೆ ಕಾಪಾಡಿ, ನಾವು ಸಂಬಂಧಪಟ್ಟ ಇಲಾಖೆಗೆ ವಿಷಯಗಳನ್ನು ನಿವೇದಿಸಿಕೊಂಡಿದ್ದಕ್ಕೆ ಇರುವ ಏಕೈಕ ಸಾಕ್ಷಿಯೆಂದು ಆ ಕಾರ್ಡನ್ನು ಚಿನ್ನಾಭರಣಗಳಿಗಿಂತ ಹೆಚ್ಚಾಗಿ ಕಾಪಾಡುವುದು. ನಾವು ಬರೆದ "Address change", "Scanning Machine change", "Topography change" ಅನ್ನೋ ಯಾವ ಕಾಗದಕ್ಕೂ, ಕನಿಷ್ಠ ತಾವು ಅದರ ಬಗ್ಗೆ ನಿಗಾ ವಹಿಸಿದ್ದೇವೆಂದು ತಿಳಿಸುವ ಎರಡು ಸಾಲಿನ ಮರುಪತ್ರ ಕೂಡ ಬರುವುದಿಲ್ಲ. ಇದನ್ನೆಲ್ಲಾ ಶುಚಿಗೊಳಿಸುವವರು ಯಾರು ? ನಮ್ಮ ಘನಸರ್ಕಾರ - ಕೇಂದ್ರ ಹಾಗೂ ರಾಜ್ಯಮಟ್ಟದಲ್ಲಿ ಇದನ್ನು ಬಹು ಶ್ರದ್ಧೆಯಿಂದ ಜಾರಿಗೆ ತಂದಿದ್ದರೂ ಕೂಡ, ಇದರಲ್ಲಿರುವ ನ್ಯೂನತೆಗಳು ಹಾಗೂ ಕೊರತೆಗಳನ್ನು ತಿದ್ದುಪಡಿ ಮಾಡುವಲ್ಲಿ ಏಕೋ ಏನೋ ಹಿಂದುಳಿದಿದೆ. ಇದರ ಬಗ್ಗೆ ಹೆಚ್ಚು ಹೆಚ್ಚು ಗಮನವನ್ನೀಯುತ್ತಿಲ್ಲ.

ಈಗ ಜನಸಾಮಾನ್ಯರಿಗೆ AIDS ರೋಗದ ಬಗ್ಗೆ ಸಾಮೂಹಿಕ ಮಾಧ್ಯಮಗಳಿಂದ ಎಷ್ಟರ ಮಟ್ಟಿಗೆ ತಿಳುವಳಿಕೆ ಉಂಟಾಗಿದೆಯೋ, ಅದರಲ್ಲಿ ಒಂದು ಸಣ್ಣ ಭಾಗ ಕೂಡ ಈ ಸ್ತ್ರೀ ಭ್ರೂಣಹತ್ಯೆ ಬಗ್ಗೆ ಉಂಟಾಗಿಲ್ಲ. ಇದಕ್ಕೆ ಇನ್ನಷ್ಟು ಪ್ರಚಾರ ಸಿಗಬೇಕು. ಇನ್ನಷ್ಟು ಅರಿವು ಮೂಡಿಸುವ ಪ್ರಯತ್ನ ಸಾಗಬೇಕು. ಇದು ನಮ್ಮೆಲ್ಲರ ಹಾಗೂ ಸರ್ಕಾರದ ಮತ್ತು ಸರ್ಕಾರೇತರ ಸಂಸ್ಥೆಗಳ ಆದ್ಯ ಕರ್ತವ್ಯ.

ಒಟ್ಟಿನಲ್ಲಿ ಹೇಳುವುದಾದರೆ ಪ್ರಕೃತಿಗೆ ಒಂದು ನಿಯಮವಿದೆ – ಗಂಡು ಹೆಣ್ಣುಗಳ ಸಮತೋಲನವನ್ನು ತಂತಾನಾಗೇ ಕಾಪಾಡಿಕೊಂಡು ಹೋಗೋದು. ಇದನ್ನು ಮನುಷ್ಯ ಉಲ್ಲಂಘಿಸಿದರೆ ಆಗುವ ಅನಾಹುತಗಳೇ ಹೆಚ್ಚು.

ಹೀಗಾಗದಂತೆ ನಾವೇನು ಮಾಡಬಹುದೋ ಆಲೋಚಿಸೋಣ.

1) ಭ್ರೂಣಲಿಂಗ ಪತ್ತೆ ಮಾಡದೇ ಇರುವುದು – ವೈದ್ಯರಿಂದ ಒಂದು ಸ್ಪಷ್ಟ ನಿಲುವು.

2) ವೈದ್ಯರು ಹುಟ್ಟುವ ಮಗು ಹೆಣ್ಣಿರಲಿ, ಗಂಡಿರಲಿ, ಅದು ಆರೋಗ್ಯವಂತವಾಗಿರುವುದೇ ಮುಖ್ಯ ಎಂದು ತಂದೆ ತಾಯಿಯರಿಗೆ ಮನವರಿಕೆ ಮಾಡಿಕೊಡುವುದು.

3) ದೇಶದ ಎಲ್ಲಾ ಮಕ್ಕಳಿಗೂ ಕಡ್ಡಾಯವಾಗಿ ಪ್ರಾಥಮಿಕ ಶಿಕ್ಷಣ ಸಿಗುವಂತೆ ವ್ಯವಸ್ಥೆ ಮಾಡುವುದು.

4) ಮನೆಯಲ್ಲಿ ತಂದೆ ತಾಯಿಗಳು ಹೆಣ್ಣು ಮತ್ತು ಗಂಡು ಮಕ್ಕಳನ್ನು ಭೇದವಿಲ್ಲದೆ ಬೆಳೆಸುವುದು.

5) ಭಿತ್ತಿ ಪತ್ರಗಳೂ ಹಾಗೂ ಮಾಧ್ಯಮಗಳ ಮೂಲಕ ಈ ಸಮಸ್ಯೆಗೆ ಅತಿ ದೊಡ್ಡ ಪ್ರಮಾಣದಲ್ಲಿ ಪ್ರಚಾರ ಒದಗಿಸುವುದು.

ವೇಶ್ಯಾಟನೆ : ಕೆಲವು ಮುಖಗಳು

ಪ್ರಾಯಶಃ ವೇಶ್ಯಾವೃತ್ತಿ ಪ್ರಾಚೀನ ಕಾಲದಿಂದ ಇಂದಿನ ತನಕವೂ ಬೆಳೆದು ಬಂದಿರುವಂಥದು. ಅದಕ್ಕೆ ಕೆಲವು ಕಾರಣಗಳನ್ನು ಹುಡುಕುವುದಾದರೆ ಪುರುಷಪ್ರಧಾನ ಸಮಾಜ ವ್ಯವಸ್ಥೆ, ನಿಯಂತ್ರಿತ ಲೈಂಗಿಕತೆ, ಹೆಂಗಸರಿಗೆ ಆರ್ಥಿಕ ಗಳಿಕೆಯ ಮೂಲಗಳ ಕೊರತೆ ಹಾಗೂ ಇದೊಂದು ಲಾಭದಾಯಕ ಉದ್ಯಮವೆನಿಸಿರುವುದು ಕಾರಣಗಳಿರಬೇಕು.

ವ್ಯವಸ್ಥೆ ಪುರುಷಪ್ರಧಾವಾಗಿದ್ದಾಗ ಪುರುಷನ ಆಸೆಗಳಿಗೆ ಹೆಚ್ಚು ಮಾನ್ಯತೆ ಇರುತ್ತದೆ. ವಿಧಿ ನಿಷೇಧಗಳೆಲ್ಲ ಮಹಿಳೆಯರಿಗೆ ಅನ್ವಯವಾಗುವಂತೆ ಪುರುಷರಿಗೆ ಅನ್ವಯವಾಗಲಾರದು. ಏಕೆಂದರೆ ಅವುಗಳನ್ನು ತನಗೆ ಅನುಕೂಲಕರವಾಗುವ ರೀತಿಯಲ್ಲಿ ಅನ್ವಯಿಸಿಕೊಳ್ಳುವ ಚೈತನ್ಯ ಪುರುಷವರ್ಗಕ್ಕಿರುತ್ತದೆ. ಅಂಥಲ್ಲಿ ಪುರುಷ ವರ್ಗದ ಲೈಂಗಿಕ ದಾಹ, ಹಲವು ಮೂಲಗಳಲ್ಲಿ ತೃಪ್ತಿ ಕಾಣಲು ಯತ್ನಿಸಿರಬೇಕು. ಅದರಿಂದ ಸೃಷ್ಟಿಸಲ್ಪಟ್ಟುದು ವೇಶ್ಯಾವೃತ್ತಿ. (ಬಹುಶಃ ವ್ಯವಸ್ಥೆ ಮಹಿಳಾ ಪ್ರಧಾನವಾಗಿದ್ದರೆ ಸ್ಥಿತಿ ವಿರುದ್ಧವಾಗಿರುತ್ತಿತ್ತೋ ಏನೋ ?)

ಲೈಂಗಿಕ ಚಟುವಟಿಕೆಗಳಿಗೆ ಪತ್ನಿ ಇದ್ದರೂ ಪುರುಷ ಇತರ ಮೂಲಗಳಲ್ಲಿ ತೃಪ್ತಿ ಅರಸಲು ಕಾರಣವೇನು ? ಬಹುಪಾಲು ಆತ ಪತ್ನಿಯಿಂದ ತೃಪ್ತಿ ಪಡೆಯಲು ಸಾಧ್ಯವಾಗಲಿಲ್ಲ ಎನ್ನಬಹುದು. ಏಕೆಂದರೆ ಪುರುಷಪ್ರಧಾನ ವ್ಯವಸ್ಥೆಯಲ್ಲಿ ಪತ್ನಿಯ ಸ್ಥಾನ ಚರಣದಾಸಿ ಎಂಬುದಷ್ಟೇ. ಅಂದರೆ ಆಕೆ ಗಂಡನ ಆಸೆಗಳಿಗೆ ತಕ್ಕಂತೆ ಪ್ರತಿಸ್ಪಂದಿಸಬೇಕು. ಅಂಥಲ್ಲಿ ಲೈಂಗಿಕ ಕ್ರಿಯೆಯ ಸಂದರ್ಭದಲ್ಲಿಯೂ ಆಕೆ ಒಂದು ರೀತಿಯ ಭಾವನಾತ್ಮಕ ನಿಯಂತ್ರಣಕ್ಕೆ ಒಳಗಾದಳು. ಅಂಥ ನಿಯಂತ್ರಣದಿಂದ ಆಕೆ ತನ್ನ ಸಹಜ ಲೈಂಗಿಕ ಭಾವನೆಗಳಿಗನುಗುಣವಾಗಿ ಸ್ಪಂದಿಸುವುದು ಸಾಧ್ಯವಾಗಲಿಲ್ಲ. ಅಂದರೆ ಗಂಡಿನ ಕ್ರಿಯೆಗಳಿಗೆ ಸರಿಸಮನಾದ ಪ್ರತಿಕ್ರಿಯೆ ಲಭ್ಯವಾಗಲಿಲ್ಲ. ತನ್ನ ಕ್ರಿಯೆಗಳಿಗೆ ಸಿಗಬೇಕಾದ ಪ್ರತಿಕ್ರಿಯೆ ಸಿಗದೆ ಹೋದಾಗ ಅಲ್ಲಿ ಉಂಟಾಗುವುದು ಅತೃಪ್ತಿಯೇ. ಹೆಂಗಸಿಗೆ ಅತೃಪ್ತಿ ಇರಲಾರದೆಂದಲ್ಲ. ಆದರೆ ಆಕೆ ಸಹಜವಾಗಿ ಲೈಂಗಿಕ ಕ್ರಿಯೆಯಲ್ಲಿ ಪಾಲ್ಗೊಳ್ಳದೆ ತಾನು ಏನು ಮಾಡಿದರೆ ಸರಿ ಏನು ಮಾಡಿದರೆ ತಪ್ಪು ಎಂಬ ತುಮುಲದಲ್ಲಿರುತ್ತಾಳೆ ಎಂದರೆ ತಪ್ಪಾಗಲಾರದು. ಅಂಥಲ್ಲಿ ಆಕೆಗೆ ಲೈಂಗಿಕ ಕ್ರಿಯೆಯೆಂಬುದು ಯಾಂತ್ರಿಕವಾಗಬಹುದೇ ಹೊರತು ದೇಹವನ್ನು ಮನಸ್ಸನ್ನು ಉಲ್ಲಸಿತಗೊಳಿಸುವುದಾಗದು. ಇದರಿಂದ ಹೆಣ್ಣಿನ ಅತೃಪ್ತಿ ಗಂಡಿಗಿಂತ ಹೆಚ್ಚಿನದಾಗಿದ್ದರೆ ಆಶ್ಚರ್ಯವಿಲ್ಲ. ಆದರೆ ಆಕೆ ಪುರುಷಪ್ರಧಾನ ವ್ಯವಸ್ಥೆಯಲ್ಲಿ ತೃಪ್ತಿಯ ಇತರ ಮೂಲಗಳನ್ನು ಹುಡುಕಲಾರದ ನಿಯಂತ್ರಣಕ್ಕೆ ಒಳಗಾಗಿಬಿಟ್ಟಿದ್ದಾಳೆ. ಆ ನಿಯಂತ್ರಣದ ಬಹು ಮುಖ್ಯ ಅಸ್ತ್ರಗಳು ಪಾತಿವ್ರತ್ಯ ಮತ್ತು ಶೀಲ. ಹೆಣ್ಣಿನ ಪಾತಿವ್ರತ್ಯಕ್ಕೆ, ಶೀಲಕ್ಕೆ ಇರುವಂಥ ಪಾವಿತ್ರ್ಯತೆಯ ನಿಯಂತ್ರಣ ಗಂಡಿನ ಬಗ್ಗೆ ಸಡಿಲವಿದೆ. ಬಹುಶಃ ಈ ಒಂದು ಕಲ್ಪನೆ ಮಹಿಳಾ ಶೋಷಣೆಯ ನಾನಾ ವಿಧಗಳಲ್ಲಿ ಮುಖ್ಯ ಪಾತ್ರ ವಹಿಸುತ್ತಲೇ ಇರುತ್ತದೆ.

ಇಲ್ಲಿ ಅತೃಪ್ತ ಗಂಡು ತನ್ನ ಅತೃಪ್ತಿಯನ್ನು ತಣಿಸಲು ವೇಶ್ಯಾಮೂಲವನ್ನು ಹುಡುಕಿರಬಹುದು. ಅಲ್ಲಿ ತೃಪ್ತಿಯನ್ನು ಕಂಡ. ವೇಶ್ಯೆಯರು ಹೆಂಡತಿಯಂತಲ್ಲ. ಅವರು ಗಂಡಿನ ಸಹಜ ಕಾಮನೆಗಳಿಗೆ ಸರಿಸಮವಾಗಿ ಪ್ರತಿಸ್ಪಂದಿಸಬಲ್ಲರು. ಏಕೆಂದರೆ ಅವರಿಗೆ ಹೆಂಡತಿಗಿರುವಂಥ ನಿರ್ಬಂಧಗಳು ಇಲ್ಲ. ಪಾತಿವ್ರತ್ಯ ಮತ್ತು ಶೀಲದ ಕಲ್ಪನೆಯಂತೂ ದೂರವೇ ಉಳಿಯಿತು. ಇದರಿಂದ ಎಂಥ ದುಷ್ಟತನ ಪ್ರದರ್ಶಿಸಲ್ಪಟ್ಟಿತೆಂಬುದಕ್ಕೆ ದೇವರ ಸೇವೆಗೆಂದು ಹೆಣ್ಣನ್ನು ಮೀಸಲಿಡುವ ಸಂಪ್ರದಾಯದಲ್ಲಿ ಹುಡುಕಬೇಕು. ನಿಜವಾಗಿಯಾದರೂ ಆಕೆ ಮಾಡುವುದು ದೇವರ ಸೇವೆಯಲ್ಲ. ಕಾಮಪಿಪಾಸುಗಳಾದ ಗಂಡಸರ ಸೇವೆ. ಸಾಮಾನ್ಯ ವೇಶ್ಯಾವೃತ್ತಿಯಲ್ಲಿ ಆಕೆ ದೇಹವನ್ನು ಕೊಟ್ಟುದಕ್ಕೆ ಪ್ರತಿಯಾಗಿ ಹಣವಾದರೂ ಸಿಗುತ್ತದೆ. ಆದರೆ ದೇವರ ಸೇವೆಗೆ ಮೀಸಲಾದ ಹೆಂಗಸಿಗೆ ಅದೂ ಇಲ್ಲ. ಅವರಿರುವುದೇ ಉಚಿತ ಸೇವೆ ಮಾಡುವುದಕ್ಕಾಗಿ. ಇಲ್ಲಿ ಆಕೆಗೇನಾದರೂ ಉಡುಗೊರೆ ದೊರೆತರೆ ಕಾಮಪಿಪಾಸುವಾದ ಗಂಡಿನಲ್ಲೂ ಇರಬಹುದಾದ ಒಂದಷ್ಟು ಔದಾರ್ಯದಿಂದಷ್ಟೇ ಹೊರತು ತಾನು ಸಲ್ಲಿಸುವ ಕೆಲಸಕ್ಕೆ ಇಷ್ಟು ಮೌಲ್ಯವಿದೆ (ಸಾಂಪತ್ತಿಕ ದೃಷ್ಟಿಯಲ್ಲಿ) ಎನ್ನುವ ಅಧಿಕಾರ ಆಕೆಗಿಲ್ಲ. ಮಹಿಳೆಯರ ಮೇಲೆ ನಡೆಯುವ ದೌರ್ಜನ್ಯದ ಪರಮಾವಧಿಗೆ ಇದಕ್ಕಿಂತ ಒಳ್ಳೆಯ ಉದಾಹರಣೆ ಸಿಗಬಹುದೇ ?

ಪುರುಷಪ್ರಧಾನ ವ್ಯವಸ್ಥೆಯಲ್ಲಿ ಗಂಡು ಹೆಚ್ಚು ಹೆಂಗಸರೊಂದಿಗೆ ಸಂಭೋಗ ಮಾಡುವುದು ಆತನ ಪೌರುಷತ್ವಕ್ಕೆ ಸಾಕ್ಷಿ ಎಂಬ ಕಲ್ಪನೆ ಇದೆ. ವಿಪರ್ಯಾಸವೆಂದರೆ ಇದೇ. ಹೆಣ್ಣನ್ನು ಸಮಾಜದಲ್ಲಿ ಅಬಲೆ ಎಂಬ ದೃಷ್ಟಿಯಿಂದ ನೋಡಲಾಗಿದೆ. ಅಂಥ ಅಬಲೆಯೊಡನೆ ಸಂಭೋಗದ ಮೂಲಕ ಪ್ರದರ್ಶಿಸುವ ಪೌರುಷತ್ವವೂ ಒಂದು ಪೌರುಷತ್ವವೇ ? ನಿಜವಾಗಿ ತಾಕತ್ತಿರುವ ಗಂಡಸರು ಪೌರುಷತ್ವವನ್ನು ಪ್ರದರ್ಶಿಸಬೇಕಾದ್ದು ಅಬಲೆಯೊಡನಲ್ಲ. ತನಗೆ ಸರಿಸಮನಾದ ಪುರುಷತ್ವವಿರುವವರೊಡನೆ. ಆದರೆ ಸಂಭೋಗದ ಮೂಲಕ ಪೌರುಷತ್ವವನ್ನು ಸಾಬೀತು ಪಡಿಸುವ ವಿಕೃತ ಕಾಲ್ಪನಿಕ ತಿಳುವಳಿಕೆ ಗಂಡು ಹಲವು ಹೆಂಗಸರನ್ನು ಹುಡುಕುವಂತೆ ಮಾಡಿರಬಹುದು.

ಪೌರುಷತ್ವವನ್ನು ಸಾಬೀತು ಪಡಿಸುವ ಕಲ್ಪನೆಯ ಹಿಂದಿರುವ ಸತ್ಯ ಸಂಗತಿ ಇದಲ್ಲ. ನಿಜವಾದ ಪೌರುಷವಂತನಿಗೆ ಅದನ್ನು ಸಾಬೀತು ಪಡಿಸಬೇಕಾದ ಅಗತ್ಯವಿರಲಾರದು.

ಪರೀಕ್ಷೆಗೊಳಗಾದಾಗ ಅದು ತಾನೇ ತಾನಾಗಿ ಸಾಬೀತಾಗುತ್ತದೆ. ಆದರೆ ಗಂಡು ಸಂಭೋಗದ ವಿಷಯದಲ್ಲಿ ಹೆಣ್ಣಿಗಿಂತ ದುರ್ಬಲ. ಆತ ಬಹುಬೇಗನೆ ಲೈಂಗಿಕ ಪ್ರಚೋದನೆಗೊಳಗಾಗುತ್ತಾನೆ. ಹಾಗೆಯೇ ಆತನ ವೀರ್ಯಸ್ರಾವದೊಡನೆ ತನ್ನ ಲೈಂಗಿಕ ಆಸಕ್ತಿಯನ್ನು ಆ ಮಟ್ಟಿಗೆ ತಕ್ಷಣ ಕಳೆದುಕೊಳ್ಳುತ್ತಾನೆ. ಅದಲ್ಲದೆ ಏಕಕಾಲಕ್ಕೆ ಬಹುಮಂದಿ ಹೆಂಗಸರೊಡನೆ ಸಂಭೋಗ ನಡೆಸುವ ಸಾಮರ್ಥ್ಯ ಅವನಿಗಿಲ್ಲ. ಆದರೆ ಹೆಣ್ಣು ಹೀಗಲ್ಲ. ಲೈಂಗಿಕ ಕ್ರಿಯೆಯಲ್ಲಿ ಆಕೆ ಪುರುಷನಿಗಿಂತ ಎಷ್ಟೋ ಸಮರ್ಥಳು. ಆಕೆಯಲ್ಲಿ ಲೈಂಗಿಕ ಪ್ರಚೋದನೆ ಮೂಡುವುದು ನಿಧಾನವಾಗಿರುವಂತೆ ಇಳಿಯುವುದೂ ನಿಧಾನವೇ. ಅಲ್ಲದೆ ಆಕೆ ಏಕಕಾಲಕ್ಕೆ ಒಬ್ಬನಿಗಿಂತ ಹೆಚ್ಚು ಗಂಡಸರೊಂದಿಗೆ ಸಂಭೋಗ ನಡೆಸುವ ಚೈತನ್ಯ ಉಳ್ಳವಳು ! ಇಂಥಲ್ಲಿ ಗಂಡಿನ ಸಹಜ ದೌರ್ಬಲ್ಯವನ್ನು ಒಪ್ಪಿಕೊಳ್ಳಲಾಗದೆ ಅದನ್ನು ಸಾಬೀತು ಪಡಿಸುವುದಕ್ಕೆ ಹಲವು ಹೆಂಗಸರೊಡನೆ ಸಂಭೋಗ ನಡೆಸುವ ಪರಿಕಲ್ಪನೆ ಕಾಣಿಸಿರಬೇಕು. ಇದು ವೇಶ್ಯಾಸಂಗಕ್ಕೆ ಪ್ರಚೋದನೆ ನೀಡಿರುವುದಕ್ಕಿಂತಲೂ ಹೆಚ್ಚಾಗಿ ಬಹುಪತ್ನಿತ್ವಕ್ಕೆ ಪ್ರಚೋದನೆ ನೀಡಿದ ಅಂಶ. ಬಹುಪತ್ನಿತ್ವವೆಂದರೆ ಏನು ? ಅಲ್ಲಿ ಲೈಂಗಿಕತೆಗಿಂತ ಹೊರತಾದ ಅನಿವಾರ್ಯತೆಯೊಂದು ಇಲ್ಲದಿದ್ದ ಪಕ್ಷದಲ್ಲಿ ಅದೂ ಕೂಡ ವೇಶ್ಯಾಟನೆಯೇ ಅಲ್ಲವೇ ? ರಾಜರುಗಳಿಗೆ ರಾಜಕೀಯ ಸಂಬಂಧವನ್ನು ಸುಲಲಿತಗೊಳಿಸುವ ದೃಷ್ಟಿಯಿಂದ ಬಹುಪತ್ನಿತ್ವದ ಅನಿವಾರ್ಯತೆ ಇದ್ದಿರಬಹುದು. ಆದರೆ ಇತರರಿಗೆ ಆ ಅನಿವಾರ್ಯತೆ ಇತ್ತೆನ್ನಲಾಗದು. ಒಬ್ಬ ಗಂಡಿಗೆ ಹೆಂಡತಿಯದೇ ನೆಲೆಯಲ್ಲಿ ಹಲವು, ಮಂದಿ ಹೆಂಗಸರ ಅನಿವಾರ್ಯತೆ ಇರಬಹುದಾದದ್ದು ಮಕ್ಕಳ ಕಾರಣಕ್ಕಾಗಿ. ಒಬ್ಬ ಹೆಂಡತಿಯಿಂದ ಮಕ್ಕಳಾಗದೆ ಇದ್ದಾಗ, ಅದಕ್ಕೆ ಗಂಡು ಕಾರಣನಲ್ಲದಿದ್ದಾಗ ಮತ್ತು ದತ್ತು ಮಕ್ಕಳನ್ನು ಸ್ವೀಕರಿಸುವ ಮನಸ್ಸು ಇಲ್ಲದಿದ್ದಾಗ ಇನ್ನೊಂದು ಮದುವೆ ಅನಿವಾರ್ಯವಾಗುತ್ತದೆ. ಇದರ ಜೊತೆಗಿರುವ ಇನ್ನೊಂದು ಬಯಕೆ ಗಂಡು ಮಗುವಿನದು. ಪುರುಷಪ್ರಧಾನ ವ್ಯವಸ್ಥೆಯಲ್ಲಿ ಇಂಥ ಬಯಕೆ ಇರುವುದು ಸಹಜವೇ. ಅದಕ್ಕೆ ವ್ಯವಸ್ಥೆಯಲ್ಲಿ ಆಮೂಲಾಗ್ರ ಬದಲಾವಣೆ ನಡೆಯಬೇಕು, ಇರಲಿ, ಅದು ಬೇರೆ ಮಾತು.

ಆದರೆ, ಗಂಡುಮಗು ಆಗದೆ ಇರುವುದಕ್ಕೆ ಕಾರಣ ಹೆಣ್ಣಲ್ಲ. ಹೆಣ್ಣಿನ ಅಂಡಾಣುಗಳಲ್ಲಿರುವ ಎಲ್ಲ ವರ್ಣತಂತುಗಳು XX ಸ್ವರೂಪದ್ದು. ಗಂಡಿನ ವೀರ್ಯಾಣುವಿನಲ್ಲಿ ಮಾತ್ರ Y ವರ್ಣ ತಂತುಗಳಿರುತ್ತವೆ. ಆದರೆ X ವರ್ಣತಂತು ಅಂಡಾಣುವಿನ Y ವರ್ಣತಂತುವಿನೊಡನೆ ಸಂಯೋಗವಾದಾಗ ಮಾತ್ರ ಗಂಡು ಮಗು ಜನಿಸುತ್ತದೆ. ಹೀಗಾಗಿ ಮಗುವಿನ ಲಿಂಗ ನಿರ್ಧಾರಕ ಸಾಮರ್ಥ್ಯ ಗಂಡಿನದೇ ಹೊರತು ಹೆಣ್ಣಿನದಲ್ಲ. ಈ ನಿಟ್ಟಿನಲ್ಲಿ ಹೆಣ್ಣನ್ನು ದೂಷಿಸಿ ಇನ್ನೊಂದು ಮದುವೆ ಮಾಡಿಕೊಳ್ಳುವುದನ್ನು ಅನ್ಯಾಯವೆನ್ನದೆ ವಿಧಿಯಿಲ್ಲ. ಈ ಸತ್ಯ ಬಹು ಮಂದಿ ಗಂಡಸರಿಗೆ ತಿಳಿಯದಿರುವುದು ವಿಷಾದನೀಯ. ಇನ್ನಿರುವ ಅನಿವಾರ್ಯತೆಯೆಂದರೆ ಒಬ್ಬ ಹೆಂಡತಿಯೊಂದಿಗೆ ಭಾವನಾತ್ಮಕ ಸಂಬಂಧ ಸಾಧಿಸಲಾಗದೆ ಇನ್ನೊಂದು ಮದುವೆ ಮಾಡಿಕೊಳ್ಳುವುದು. ಅದು ಒಪ್ಪಿಕೊಳ್ಳಬೇಕಾದ ವಿಷಯ. ವ್ಯಕ್ತಿ ಭಿನ್ನತೆಗಳು ರಾಜಿಗೆ ಸಿದ್ಧವಾಗದೆ ಹೋದಾಗ ಭಾವನಾತ್ಮಕ ಸಂಬಂಧದಲ್ಲಿ ತೊಡಕು ಉಂಟಾಗುವುದುಂಟು. ಆದರೆ ಆಧುನಿಕ ವ್ಯವಸ್ಥೆಯಲ್ಲಿ ನಿಂತು ಹೇಳುವುದಾದರೆ ಇಲ್ಲಿ ವಿವಾಹ ವಿಚ್ಛೇದನೆಗೆ ಅವಕಾಶವಿದೆ. ಏನಾದರೂ ಭಾವಸಂಬಂಧ ಸುಧಾರಿಸಿಕೊಳ್ಳಲು ಸಾಧ್ಯವಾಗದೆ ಹೋದಾಗ ವಿಚ್ಛೇದನೆಗೊಂಡ ನಂತರ ಮರುಮದುವೆಯಾಗುವುದು ನಿಜಕ್ಕೂ ಅನಿವಾರ್ಯತೆಯೇ. ಅಂಥಲ್ಲಿ ಇದನ್ನು ಬಹುಪತ್ನಿತ್ವದ ವ್ಯಾಖ್ಯಾನಕ್ಕೆ ಒಳಪಡಿಸುವುದೇ ತಪ್ಪಾಗುತ್ತದೆ (ಆಧುನಿಕ ವ್ಯವಸ್ಥೆಯಲ್ಲಿ ಬಹುಪತ್ನಿತ್ವ ತುಂಬಾ ಕಡಿಮೆ ಇದೆ ಎಂಬುದನ್ನು ಗಮನದಲ್ಲಿ ಇಟ್ಟುಕೊಂಡೇ ಈ ಮಾತುಗಳನ್ನು ಹೇಳಲಾಗಿದೆ).

ಈ ಅನಿವಾರ್ಯತೆಗಳನ್ನೆಲ್ಲ ದಾಟಿ ಬಹುಮಂದಿ ಹೆಂಡಿರನ್ನು ಕಟ್ಟಿಕೊಂಡರೆ ಅದು ವೇಶ್ಯಾಸಂಗವಲ್ಲದೆ ಬೇರೇನು ? ಧಾರ್ಮಿಕ ವಿಧಿಯೊಂದು ನಡೆದ ಮಾತ್ರಕ್ಕೆ ಮುಂದೆ ನಡೆಯುವ ಕ್ರಿಯೆಯನ್ನು ಕಡೆಗಣಿಸಲಾಗದು. ಅಂಥಲ್ಲಿ ಇದಕ್ಕೆ ಪುಷ್ಟಿಕೊಡುವುದು ಪೌರುಷತ್ವವನ್ನು ಸಾಬೀತು ಪಡಿಸುವ ಧಾವಂತ. ಅದೇ ಧಾವಂತ ವೀರ್ಯಕ್ಕೆ ಅತಿರೇಕದ ಪ್ರಾಶಸ್ತ್ಯ ಕೊಟ್ಟಿದೆ. ಒಂದು ಹನಿ ವೀರ್ಯ ಸಾವಿರ ರಕ್ತಕಣಗಳಿಗೆ ಸಮ ಎಂಬ ಕಲ್ಪನೆ ಮೂಡಿಸಿದೆ. ಗಂಡಿನ ಮುಷ್ಟಿಮೈಥುನ, ಸ್ವಪ್ನಸ್ಖಲನಗಳನ್ನೆಲ್ಲ ಗಂಡಿನ ದುರಂತಗಳೆಂದು ಪರಿಗಣಿಸಿರುವಂತಿದೆ. ಆದರೆ ಇದೆಲ್ಲ ಸಹಜವಾಗಿ ನಡೆಯುವ ದೈಹಿಕ ಕ್ರಿಯೆಗಳು. ಈ ಸಹಜ ಕ್ರಿಯೆ ದುರಂತವೆಂಬ ಭಾವನೆ ಮೂಡಿದ ಗಂಡುಮಕ್ಕಳು ಸಂಗಾತಿ ಇಲ್ಲದೆ ಇರುವಾಗ ಏನು ಮಾಡಬೇಕು ? ತಮ್ಮ ಸಹಜ ಬಯಕೆಗಳನ್ನು ಈಡೇರಿಸಿಕೊಳ್ಳಲು ಯಾವುದಾದರೂ ಹೆಂಗಸನ್ನು ಹುಡುಕಬೇಕು. ಇಲ್ಲಿ ಕ್ರೂರಿಗಳಾದ ಗಂಡುಮಕ್ಕಳು ಅತ್ಯಾಚಾರಕ್ಕಿಳಿದಾರು. ಕೇವಲ ಮನುಷ್ಯರಾಗಿರುವವರು ವೇಶ್ಯೆಯರನ್ನು ಅರಸಿಯಾರು. (ಸಾಮಾಜಿಕವಾಗಿ ಗಂಡಿನ ಅಂದಾಜು ವಿವಾಹದ ವಯಸ್ಸಿಗೂ ಮೊದಲೇ ಈ ಬಯಕೆಗಳೆಲ್ಲ ಕಾಣಿಸುತ್ತವೆ ಎಂಬುದನ್ನು ಗಮನಿಸಬೇಕು.) ಹೀಗೆ ವೇಶ್ಯಾವೃತ್ತಿ ಗಟ್ಟಿಗೊಳ್ಳಲು ಇದೂ ಒಂದು ಕಾರಣವಾಗುತ್ತದೆ.

ವೀರ್ಯದ ಕುರಿತಾದ ಇಂಥ ಕಲ್ಪನೆಗಳಲ್ಲಿ ಸ್ವಯಂ ನಿಯಂತ್ರಣ ಸಾಧಿಸುವ ಆಶಯವಿದೆ. ನಿಯಂತ್ರಿತ ಲೈಂಗಿಕತೆಗೆ ಬಹುವಾದ ಪ್ರಾಮುಖ್ಯತೆಯನ್ನು ಕೊಟ್ಟಿರುವುದು ಇದಕ್ಕೆ ಕಾರಣವಿರಬೇಕು. ಈ ಬಗ್ಗೆ ಸಮಾಜದ ನಿಯಂತ್ರಣ ಎಲ್ಲಿಯ ತನಕ ಮುಂದುವರಿದಿದೆಯೆಂದರೆ ಪ್ರೌಢ ಗಂಡುಮಕ್ಕಳು, ಹೆಣ್ಣು ಮಕ್ಕಳನ್ನು ಸ್ಪರ್ಶಿಸುವುದಂತಿರಲಿ, ಮಾತನಾಡುವುದೂ ಅಪೇಕ್ಷಣೀಯವಲ್ಲ ಎಂಬ ನಂಬಿಕೆಯನ್ನು ಹುಟ್ಟುಹಾಕಿದೆ. ಅದರಿಂದ ಗಂಡು-ಹೆಣ್ಣಿನ ನಡುವೆ ಪರಸ್ಪರ ಭಾವನೆಗಳನ್ನು ಅರಿಯುವ ಮೂಲಕ ಸಾಧಿಸಬಹುದಾದ ಒಳಿತುಗಳಿಗೆ ಬಲವಾದ

ತೆರೆಯೊಂದನ್ನು ಎಳೆಯಲಾಗುತ್ತದೆ. ಅಲ್ಲಿ ಉಳಿದುಕೊಳ್ಳುವುದು ಕುತೂಹಲ ಮಾತ್ರ.

ಆ ಕುತೂಹಲವನ್ನು ಶಮನಗೊಳಿಸಿ ಲೈಂಗಿಕ ಅರಿವು ಮೂಡಿಸುವ ಕಾರ್ಯದಲ್ಲಿ ಪಾಲಕರೂ ಹಿಂದುಳಿದಿದ್ದಾರೆ. ಶಿಕ್ಷಣ ಸಂಸ್ಥೆಗಳೂ ಹಿಂದುಳಿದಿವೆ. ಏಕೆಂದರೆ ಮಕ್ಕಳೊಡನೆ ಲೈಂಗಿಕ ವಿಚಾರಗಳನ್ನು ಚರ್ಚಿಸುವುದು ಸರಿಯಲ್ಲವೆಂಬ ನಂಬಿಕೆ ನಮ್ಮಲ್ಲಿದೆ. ಈ ನಂಬಿಕೆ ದೂರವಾಗುತ್ತಿಲ್ಲವೆಂದಲ್ಲ, ಆದರೆ ಅದು ಪ್ರಾಯಶಃ ಅಂಕಗಣಿತದ ಪ್ರಮಾಣದಲ್ಲಿ ದೂರವಾಗುತ್ತಿದೆ (1, 2, 3, 4, 5....) ಆದರೆ ಆಧುನಿಕತೆ ರೇಖಾಗಣಿತ ಮಾದರಿಯಲ್ಲಿ ಬೆಳೆಯುತ್ತಿದೆ (1, 2, 4, 8, 16, 32.....). ಅಂಥಲ್ಲಿ ಆಧುನಿಕ ಮಾಧ್ಯಮಗಳು ಬಹುಬೇಗ ಜನರನ್ನು ತಲುಪುತ್ತವೆ. ಲೈಂಗಿಕ ನಿಯಂತ್ರಣ ಅತಿಯಾಗಿರುವ ಒಂದು ಸಮಾಜದಲ್ಲಿ ಲೈಂಗಿಕ ಆಸಕ್ತಿಯನ್ನು ಕೆರಳಿಸುವ ಕೆಲಸ ಮಾಡುವ ಮೂಲಕ ಅವು ಅತಿ ಹೆಚ್ಚು ಲಾಭ ಗಳಿಸಬಲ್ಲವು. ಆದರೆ ಮಾಧ್ಯಮಗಳು ಒಟ್ಟು ವ್ಯವಸ್ಥೆಯ ಸಾಂಸ್ಕೃತಿಕ ಮೌಲ್ಯಗಳನ್ನು ಗಮನಿಸಿ ಲೈಂಗಿಕತೆಯ ಸೂಕ್ಷ್ಮ ಒಳನೋಟಗಳನ್ನು ಕೊಟ್ಟು ವ್ಯಕ್ತಿಯ ಹಾಗೂ ಸಮಾಜದ ಹಿತವನ್ನು ಕಾಯ್ದುಕೊಳ್ಳುವ ಅವುಗಳ ಬದ್ಧತೆಯನ್ನು ಕಡೆಗಣಿಸಿ, ಕೇವಲ ಆರ್ಥಿಕ ಲಾಭಕ್ಕಾಗಿ ಲೈಂಗಿಕ ಆಸಕ್ತಿಯನ್ನು ಕೆರಳಿಸಿ ಬಿಟ್ಟರೆ ಅದರಿಂದ ಲೈಂಗಿಕ ಅರಿವಿನ ವಿಕೃತೀಕರಣವಾಗುತ್ತದೆ. ಲೈಂಗಿಕ ವಿಕೃತೀಕರಣಗೊಂಡ ಮನಸ್ಸುಗಳು ನಡೆಯುವ ದಾರಿ ವೇಶ್ಯಾಸಂಗದತ್ತ ಕೊಂಡೊಯ್ಯಬಹುದು.

ಇಂಥಲ್ಲಿ ಪಾಲಕರು ಮತ್ತು ಶಿಕ್ಷಕರ ಜವಾಬ್ದಾರಿ ಬಹಳ ದೊಡ್ಡದು. ಲೈಂಗಿಕತೆಯ ಕುರುತಾದ ನಿಯಂತ್ರಣಕ್ಕೆ ಕಥೆ, ನಾಟಕ ಇತ್ಯಾದಿಗಳನ್ನೇ ಹೇಳಿ ನೀತಿಪ್ರಜ್ಞೆಯನ್ನು ಪ್ರೌಢ ಮಕ್ಕಳಲ್ಲಿ ಬೆಳೆಸಲು ಸಾಧ್ಯವಿದೆಯೇ ? ಕಾಲ್ಪನಿಕ ಕಥೆಗಳಿಗೆ, ಈಗ ಬದುಕಿರದ ಚಾರಿತ್ರಿಕ ವ್ಯಕ್ತಿಗಳಿಗೆ ವಾಸ್ತವವನ್ನು ಎದುರಿಸಿ ನೀತಿ ಪ್ರಜ್ಞೆಯನ್ನು ಗಟ್ಟಿಗೊಳಿಸುವ ಸಾಮರ್ಥ್ಯವಿರಬಹುದೇ ? 'ಇದೆಲ್ಲ ಸಲ್ಲ' ಎಂಬ ಮಾತುಗಳು 'ಯಾಕೆ ಸಲ್ಲ ?' ಎಂಬ ಪ್ರಶ್ನೆಗೆ ಉತ್ತರಿಸಬಲ್ಲವೇ ? ಈ ಪ್ರಶ್ನೆಗಳು ಹಿರಿಯರನ್ನು ಕಾಡಬೇಕು. ಇವಕ್ಕೆ ಉತ್ತರ ಹುಡುಕತೊಡಗಿದಾಗ ಪ್ರೌಢ ಮಕ್ಕಳಿಗೆ ಲೈಂಗಿಕ ತಿಳಿವಳಿಕೆ ಕೊಟ್ಟು ಮೌಲ್ಯಪ್ರಜ್ಞೆಯನ್ನು ಜಾಗೃತಗೊಳಿಸಬೇಕಾದ ಅಗತ್ಯವೇನೆಂಬುದು ಹಿರಿಯರಿಗೆ ಅರ್ಥವಾದೀತು. ಇದು ಸಾಧ್ಯವಾದಾಗ ಪ್ರೌಢ ಮಕ್ಕಳೊಂದಿಗೆ ಹಿರಿಯರ ವ್ಯವಹಾರವೂ ಕೂಡ ಅಪೇಕ್ಷಣೀಯ ಬದಲಾವಣೆಗೆ ಒಳಪಟ್ಟೀತು.

ಇಲ್ಲಿ ಹೇಳಬೇಕಾದ ಇನ್ನೊಂದು ವಿಚಾರವೆಂದರೆ, ಪ್ರೌಢ ಬಾಲಕಿಯರನ್ನು ಲೈಂಗಿಕ ಚಟುವಟಿಕೆಗಳಿಗೆ ಬಳಸಿಕೊಳ್ಳುವ ಮತ್ತು ವೇಶ್ಯಾವಾಟಿಕೆಯತ್ತ ದೂಡುವ ಪ್ರವೃತ್ತಿ. ಇದಕ್ಕೆ ಒಂದು ಕಾರಣ ಸಮಾಜಕ್ಕೆ ತೆರೆದುಕೊಳ್ಳುತ್ತಿರುವ ಪ್ರೌಢ ಬಾಲಕಿಯರ ಬಯಕೆಗಳನ್ನು ಪೂರೈಸುವ ಆರ್ಥಿಕ ಶಕ್ತಿ ಪಾಲಕರಿಗೆ ಇರದೆ ಇರುವುದಾಗಿರಬಹುದು. ಅದಕ್ಕಿಂತ ಮುಖ್ಯವಾಗಿ ಹೆಣ್ಣು ಮಕ್ಕಳ ಬಗೆಗಿರುವ ಅಸಡ್ಡೆ, ಅದರಿಂದ ಅವರು ಕಳೆದುಕೊಳ್ಳುತ್ತಿರುವ ಹಿರಿಯರ ಪ್ರೀತಿ ಕಾರಣವಾಗಿರುತ್ತದೆ. ಅಂಥಲ್ಲಿ ಪ್ರೀತಿಯ ಹುಡುಕಾಟ ನಡೆಸುವ ಬಾಲಕಿಯರಿಗೆ ಅವರನ್ನು ಬಳಸಿಕೊಳ್ಳುವವರು ಪ್ರೀತಿಯ ಆಮಿಷ ಒಡ್ಡಬಲ್ಲರು. ಪ್ರತಿಯೊಬ್ಬ ಮನುಷ್ಯನಿಗೂ ಎಲ್ಲ ಆಮಿಷಗಳಿಗಿಂತ ಪ್ರೀತಿಯ ಆಮಿಷ ಬಲು ದೊಡ್ಡದು. ಅಂಥಲ್ಲಿ ವ್ಯವಸ್ಥೆಯ ಸೂಕ್ಷ್ಮ ಒಳನೋಟಗಳು ಅರ್ಥವಾಗಿರದ ಬಾಲಕಿಯರು ಈ ಆಮಿಷಕ್ಕೊಳಗಾದರೆ ಆಶ್ಚರ್ಯವಿಲ್ಲ. ಇದಕ್ಕೆ ಹೆಣ್ಣು ಮಕ್ಕಳ ಬಗ್ಗೆ ಹಿರಿಯರ ಅಸಡ್ಡೆ ಹೇಗೆ ಕಾರಣವಿರುತ್ತದೋ ಮಕ್ಕಳ ಮೇಲಿನ ತಮ್ಮ ಪ್ರೀತಿಯನ್ನು ಅವರಿಗೆ ಅರ್ಥಮಾಡಿಸಲಾಗದ ದೌರ್ಬಲ್ಯವೂ ಕಾರಣವಿರುತ್ತದೆ. ಅದು ಬರುವುದು ಹಿರಿಯರು ಮಕ್ಕಳಿಂದ ಪ್ರಶ್ನಾತೀತ ಗೌರವ ಹಾಗೂ ವಿಧೇಯತೆಯನ್ನು ನಿರೀಕ್ಷಿಸುವುದರಿಂದ.

ಮುಂದಿನ ಆಯಾಮ ಆರ್ಥಿಕತೆಗೆ ಸಂಬಂಧಿಸಿದ್ದು. ಒಟ್ಟಾರೆ ಸಮಾಜದಲ್ಲಿ ಹೆಂಗಸರಿಗೆ ಹಣಗಳಿಕೆಯ ಮೂಲಗಳ ಕೊರತೆ ಇದೆ. ಈ ಮೂಲಗಳನ್ನು ಸದ್ಯದ ಪ್ರಭುತ್ವ, ಹೆಂಗಸರಿಗೆ ತೆರೆದಿಟ್ಟಿದೆಯಾದರೂ ಸಾಮಾಜಿಕ ಮನಃಸ್ಥಿತಿ ಅದನ್ನು ಒಪ್ಪಿಕೊಂಡಿದೆ ಎನ್ನಲಾಗದು. ಅಂಥಲ್ಲಿ ಬಹುಮಟ್ಟಿಗೆ ಈ ಗಳಿಕೆಯ ಮೂಲಗಳಲ್ಲಿ ಲಿಂಗಸಂಬಂಧಿಯಾದ ಕಿರುಕುಳಗಳು ಹೆಂಗಸರನ್ನು ಕಾಡುತ್ತವೆ. ಇಲ್ಲಿನ ಕಿರುಕುಳಗಳು ಬಹು ಸೂಕ್ಷ್ಮವಾಗಿ ಹೆಂಗಸರ 'ಶೀಲ' ಎಂಬ ಕಲ್ಪನೆಗೆ ಧಕ್ಕೆ ತರುವಂಥವುಗಳಾಗುತ್ತವೆ. ಇಲ್ಲೆಲ್ಲ ಕಿರುಕುಳಕ್ಕೊಳಗಾಗುವ ಮಹಿಳೆಯರು ಅದನ್ನು ಎದುರಿಸಿ ನಿಲ್ಲುವ ಚೈತನ್ಯ ಕಳೆದುಕೊಂಡಾಗ ಸರಿಯುವ ದಾರಿ ವೇಶ್ಯಾವಾಟಿಕೆಯದಾಗಿದ್ದರೆ ಆಶ್ಚರ್ಯವಿಲ್ಲ.

ಇಲ್ಲಿ ಕಿರುಕುಳಕ್ಕೊಳಗಾಗುವ ಮಹಿಳೆಯರಿಗೆ ಎದುರಿಸಿ ನಿಲ್ಲುವ ಚೈತನ್ಯ ಯಾವ ಯಾವ ಮೂಲಗಳಿಂದ ಬರುತ್ತದೆ ಎಂಬುದನ್ನು ಗಮನಿಸಬೇಕು. ಮೊದಲನೆಯದಾಗಿ ಗಂಡನಿಂದ, ಅತ್ತೆ ಮಾವಂದಿರಿಂದ, ತಂದೆ ತಾಯಿಯರಿಂದ, ಸಹೋದರರಿಂದ, ಆ ಶಕ್ತಿ ಬರುತ್ತದೆ. ಭಾರತೀಯ ಸಮಾಜದಲ್ಲಿ ವೃತ್ತಿನಿರತ ಮಹಿಳೆಯರಿಗೆ ಕುಟುಂಬಮೂಲದ ಈ ಶಕ್ತಿಗಳು ಕೊಡುತ್ತಿರುವ ಬೆಂಬಲ ಸಣ್ಣದೇನಲ್ಲ. ಆದ್ದರಿಂದಲೇ ವೃತ್ತಿನಿರತ ಮಹಿಳೆಯರು ತಮ್ಮ ಮೇಲೆ ಆರ್ಥಿಕ ಮೂಲಗಳಲ್ಲಿ ನಡೆಯುವ ಲೈಂಗಿಕ ದೌರ್ಜನ್ಯವನ್ನು ಪ್ರತಿಭಟಿಸಿ ನಿಲ್ಲಬಲ್ಲರು. ಆದರೆ ಗಂಡ, ತನ್ನ ಹೆಂಡತಿಯ ಮೇಲೆ ನಂಬಿಕೆಯನ್ನು ಕಳೆದುಕೊಂಡಂತೆ ಕೌಟುಂಬಿಕ ಶಕ್ತಿ ಕುಂದುತ್ತಾ ಹೋಗುತ್ತದೆ. ಕೊನೆಗೆ ಉಳಿಯುವಂಥದ್ದು ಗೆಳೆಯ ಗೆಳತಿಯರು ಕೊಡುವ ಶಕ್ತಿ. ಆದರೆ ಗಂಡನೇ ಅದಕ್ಕೆ ತಡೆಗೋಡೆಯಾಗಿ ನಿಂತಾಗ ಆ ಶಕ್ತಿಯ ಪ್ರಭಾವ ಕಡಿಮೆಯಾಗುತ್ತದೆ.

ಎರಡನೆಯ ಶಕ್ತಿ ಸಾಮಾಜಿಕ ಮೂಲದ್ದು. ಹೆಂಗಸಿನ ಮೇಲೆ ನಡೆಯುವ ಲೈಂಗಿಕ ದೌರ್ಜನ್ಯವನ್ನು ಪ್ರತಿಭಟಿಸುವ ಸಾಮಾಜಿಕ ಮನಸ್ಸುಗಳು ಆಕೆಗೆ ಬೆಂಬಲವಾಗಿ ನಿಲ್ಲುತ್ತವೆ. ಆದರೆ ಹೆಣ್ಣಿನ

ಶೀಲದ ಬಗ್ಗೆ ಸಮಾಜದಲ್ಲಿರುವ ಅನುಮಾನದ ದೃಷ್ಟಿಯನ್ನು ಲೈಂಗಿಕ ದೌರ್ಜನ್ಯ ಎಸಗುವವರು ಪುಷ್ಟಿಗೊಳಿಸಬಲ್ಲರು. ಕೇವಲ ಪಿಸುಮಾತುಗಳು ಅದಕ್ಕೆ ಸಾಕಾಗುತ್ತವೆ.

ಮೂರನೆಯದು ಪ್ರಭುತ್ವದ ಶಕ್ತಿ ಅದರಲ್ಲಿ ಜನಪ್ರತಿನಿಧಿಗಳ ಬೆಂಬಲ, ಮಹಿಳಾ ಆಯೋಗದ ಬೆಂಬಲ, ಕಾನೂನಿನ ರಕ್ಷಣೆಗಳೆಲ್ಲ ಸೇರಿಕೊಳ್ಳುತ್ತವೆ. ಜನಪ್ರತಿನಿಧಿಗಳು ವೈಯಕ್ತಿಕ ಸಮಸ್ಯೆಗಳಿಗೆ ಹೆಚ್ಚಿನ ಆದ್ಯತೆ ಕೊಡುತ್ತಾರೆ ಎನ್ನಲು ಬರುವುದಿಲ್ಲ. ಅವರು ಇತ್ತ ಕಡೆ ಗಮನ ಹರಿಸಬೇಕಾದರೆ ದೌರ್ಜನ್ಯಕ್ಕೊಳಗಾಗುವ ಹೆಂಗಸರು ಒಟ್ಟಾಗಿ ಮುಂದಡಿಯಿಡಬೇಕಾಗುತ್ತದೆ. ಆದರೆ ತಮ್ಮ ಮೇಲೆ ನಡೆಯುತ್ತಿರುವ ಲೈಂಗಿಕ ದೌರ್ಜನ್ಯವನ್ನು ಹೌದೆಂದು ಹೇಳುವ ಮೂಲಕ ಸಾಮಾಜಿಕ ಮಾನ್ಯತೆಯನ್ನು ಕಳೆದುಕೊಳ್ಳುವುದು ಯಾರಿಗಾದರೂ ಬೇಡವಾದ ವಿಷಯವಲ್ಲವೇ ? ಅಂಥಲ್ಲಿ ಮಹಿಳಾ ಆಯೋಗ ಮುಂದೆ ಬರಬಹುದು. ಆದರೆ ಅದಾದರೂ ಮೇಲ್‌ಮಟ್ಟದಲ್ಲಿ ಕಾರ್ಯ ನಿರ್ವಹಿಸುವ ಸಂಸ್ಥೆ. ಅದಕ್ಕೆ ತೀರಾ ವೈಯಕ್ತಿಕ ನೆಲೆಗೆ ಇಳಿಯುವುದು ಕಷ್ಟವಾಗಿ ಬಿಡುತ್ತದೆ. ಇಂಥಲ್ಲಿ ನ್ಯಾಯಾಲಯ ಈ ಸಮಸ್ಯೆಯನ್ನು ಬಗೆಹರಿಸಬಲ್ಲದು. ಆದರೆ ಲೈಂಗಿಕ ದೌರ್ಜನ್ಯಕ್ಕೊಳಗಾಗುವ ಮಹಿಳೆ ಸಾಮಾಜಿಕ ಮಾನ್ಯತೆಗೆ ಕುಂದುಂಟಾದರೂ ಇದನ್ನು ಪ್ರತಿಭಟಿಸಿ ನ್ಯಾಯಾಲಯದ ಮೊರೆ ಹೋಗಬಲ್ಲಳೇ ಎಂಬುದು ಸಂಶಯಾಸ್ಪದ. ಅಲ್ಲದೆ ನ್ಯಾಯಾಲಯ ಬಯಸುವ ಸಾಕ್ಷಿ-ಪುರಾವೆಗಳನ್ನು ಒದಗಿಸುವುದು ಪ್ರಯಾಸದಾಯಕ ಕೆಲಸ. ಏಕೆಂದರೆ ಲೈಂಗಿಕ ದೌರ್ಜನ್ಯ ಎಸಗುವವರು ಸುಳ್ಳು ಸಾಕ್ಷಿ ಸೃಷ್ಟಿಸಬಲ್ಲರು.

ನಾಲ್ಕನೆಯ ಶಕ್ತಿ ಸಹೋದ್ಯೋಗಿಗಳದು. ಅದು ಸಹೋದ್ಯೋಗಿ ಮಟ್ಟದಲ್ಲಿ ನಡೆಯುವ ಲೈಂಗಿಕ ದೌರ್ಜನ್ಯವನ್ನು ಎದುರಿಸುವ ಶಕ್ತಿಯನ್ನು ಹೆಂಗಸಿಗೆ ಕೊಡಬಲ್ಲದು. ಆದರೆ ಮೇಲಧಿಕಾರಿಗಳಿಂದ ದೌರ್ಜನ್ಯ ನಡೆದಾಗ ಸಹೋದ್ಯೋಗಿಗಳು ಅಸಹಾಯಕರಾಗಿ ಬಿಡುವುದೇ ಹೆಚ್ಚು.

ಕೊನೆಯದೆಂದರೆ ಹೆಂಗಸಿನ ಸ್ವಯಂಶಕ್ತಿ. ಆಕೆ. ನೈತಿಕ ಶಕ್ತಿಯಿಂದ ದೌರ್ಜನ್ಯವನ್ನು ಎದುರಿಸುವುದು ಸಾಧ್ಯವೆನ್ನಲು ಕಷ್ಟವಾಗುತ್ತದೆ. ಒಟ್ಟು ವ್ಯವಸ್ಥೆ 'ಅರ್ಥ' (Economy) ಪ್ರಧಾನವಾಗಿರುವಾಗ ದೌರ್ಜನ್ಯವನ್ನು ಎದುರಿಸುವ ಮಹಿಳೆ ಆರ್ಥಿಕ ದೃಢತೆಯನ್ನು ಹೊಂದಿರಬೇಕಾಗುತ್ತದೆ. ಆದ್ದರಿಂದಲೇ ಒಳ್ಳೆಯ ಸಂಪಾದನೆ ಗಳಿಸಬಲ್ಲ ಮಹಿಳೆಯರು ದೌರ್ಜನ್ಯವನ್ನು ಎದುರಿಸಿ ನಿಲ್ಲಬಲ್ಲರು.

ಇದೆಲ್ಲ ಇದ್ದೂ ಅನೈತಿಕ ಸಂಬಂಧ ಇಟ್ಟುಕೊಳ್ಳುವ ಮಹಿಳೆಯರು ಇಲ್ಲವೇ ಎಂದು ಕೇಳಬಹುದು. ಇದ್ದಾದರೆ, ಅದಕ್ಕೆ ಗಂಡನಿಂದ, ಕುಟುಂಬದಿಂದ ತನಗೆ ದೊರೆಯಬೇಕಾದ ಪ್ರೀತಿಯಲ್ಲಿ ಕೊರತೆ ಉಂಟಾಗಿರುವುದು ಕಾರಣವಿರಬಹುದು. ತನ್ನನ್ನು ಲೈಂಗಿಕವಾಗಿ ತೃಪ್ತಿ ಪಡಿಸಲಾಗದ ಗಂಡ, ಗಂಡನ ಸಂಪರ್ಕವನ್ನು ಕಡಿದುಕೊಂಡ ಸ್ಥಿತಿ, ವಿಧವಾವಸ್ಥೆ ಉಂಟಾದಾಗ ತಣಿಯದ ದೈಹಿಕ ಬಯಕೆಗಳಿರುವುದು ಕಾರಣವಿರಬಹುದು.

ಈ ಎಲ್ಲ ಮಿತಿಗಳನ್ನು ದಾಟಿ ವೇಶ್ಯಾವೃತ್ತಿಗಿಳಿಯುವ ಮಹಿಳೆಯರು ಬಹುಮಟ್ಟಿಗೆ ಆರ್ಥಿಕವಾಗಿ ದುರ್ಬಲರಾಗಿರುತ್ತಾರೆ. ಅದರಲ್ಲಿ ಸಾಮಾಜಿಕ ಅಸಹಾಯಕತೆ, ವೈಯಕ್ತಿಕ ನೋವು ನಿರಾಶೆಗಳೆಲ್ಲ ಇರಬಹುದು. ಆದರೆ ಇಲ್ಲಿ ಬಹು ಮುಖ್ಯವಾಗುವುದು ಬದುಕಲು ಕಷ್ಟವಾಗಿರುವ ಆರ್ಥಿಕ ದೌರ್ಬಲ್ಯ. ಶಿಕ್ಷಣದಿಂದ ದೂರವಿರುವ, ಬದುಕಲು ಬೇಕಾದ ಉದ್ಯೋಗವನ್ನು ಸಂಪಾದಿಸಲಾಗದ ಯಾತನಾಮಯ ಸನ್ನಿವೇಶದಲ್ಲಿ ಅಂಥ ಹೆಂಗಸಿನ ಬಳಿ ಮಾರಾಟ ಮಾಡಲು ಇರುವ ಏಕೈಕ ವಸ್ತುವೆಂದರೆ ತನ್ನ ದೇಹವೊಂದೇ. ಈ ಮೊದಲೇ ಹೇಳಿದ ನಾನಾ ಕಾರಣಗಳಿಗಾಗಿ ಪುರುಷನಿಗೆ ಅಂಥ ಹೆಂಗಸಿನ ದೇಹದ ಅವಶ್ಯಕತೆ ಇರುತ್ತದೆ. ಅದಕ್ಕೆ ಪರ್ಯಾಯವೆಂಬುದಿಲ್ಲ. ಇಲ್ಲಿ ವೇಶ್ಯಾವಾಟಿಕೆ ಸ್ಥಿರವಾಗಿ ಉಳಿದು ಬಿಡುತ್ತದೆ.

ಈ ವೃತ್ತಿಗಿರುವ ನಾಲ್ಕನೆಯ ಆಯಾಮವೆಂದರೆ ಇದೊಂದು ಲಾಭದಾಯಕ ಉದ್ಯಮವೆನಿಸಿರುವುದು. ಯಾವಾಗ ಪುರುಷನಿಗೆ ವೇಶ್ಯೆಯರ ಅನಿವಾರ್ಯತೆ ಉಂಟಾಗುತ್ತದೋ ಆಗ ಆತ ದೇಹದ ಹಸಿವನ್ನು ತೀರಿಸಿಕೊಳ್ಳಲು ವೇಶ್ಯೆಯರತ್ತ ಹೋಗುವುದು ಸಹಜ. ಅದಕ್ಕಾಗಿ ಹಣ ತೆರಲು ಸಿದ್ಧನಾಗಬೇಕು. ಪುರುಷರಲ್ಲಿ ಈ ಅನಿವಾರ್ಯತೆ ಹೆಚ್ಚುಹೆಚ್ಚಾದಂತೆ ವೇಶ್ಯಾವಾಟಿಕೆ, ಉದ್ಯಮವಾಗಿ ಬೆಳೆಯುತ್ತಾ ಹೋಗುತ್ತದೆ. ಅಂಥಲ್ಲಿ ವೇಶ್ಯಾಟನೆಗೆ ಹೆಂಗಸರನ್ನು ಕಲೆ ಹಾಕುವ ಕೆಲಸ ಪ್ರಾರಂಭವಾಗುತ್ತದೆ. ಅಂಥ ಏಜೆಂಟರುಗಳು ಹುಟ್ಟಿಕೊಳ್ಳುತ್ತಾರೆ. ಪ್ರೀತಿಯ ಆಮಿಷ ಒಡ್ಡಿ, ಹೆದರಿಸಿ-ಬೆದರಿಸಿ-ಮೋಸ ವಂಚನೆಗಳನ್ನು ಮಾಡಿ ಹೆಂಗಸರನ್ನು ಕಲೆ ಹಾಕಲಾಗುತ್ತದೆ.

ಹೀಗೆ ಇದು ಉದ್ಯಮವಾಗಿ ಬೆಳೆದಾಗ ಉದ್ಯೋಗವನ್ನು ಸೃಷ್ಟಿಸಬಹುದು. ಹಣಕಾಸಿನ ಚಲಾವಣೆ ಅಧಿಕವಾದೀತು. ಆರ್ಥಿಕವಾಗಿ ದುರ್ಬಲರಾದ ಹೆಂಗಸರು ಆರ್ಥಿಕವಾಗಿ ಸಬಲರಾಗಬಹುದು. ಕೊನೆಗೆ ಪ್ರಭುತ್ವಕ್ಕೆ ತೆರಿಗೆ ಸಂಗ್ರಹದ ಒಂದು ಮೂಲವೂ ಆಗಬಹುದು (ವಿಜಯನಗರದ ಅರಸರು ವೇಶ್ಯಾವಾಟಿಕೆಗಳಿಂದ ತೆರಿಗೆ ಸಂಗ್ರಹಿಸುತ್ತಿದ್ದರು). ಅರ್ಥ ವ್ಯವಸ್ಥೆಗೆ ಈ ಉದ್ಯಮ ಪ್ರಯೋಜನಕಾರಿಯಾದೀತು.

ಆದರೆ ಸಾಮಾಜಿಕ ಸ್ವಾಸ್ಥ್ಯಕ್ಕೆ ? ನಾವು ರೂಪಿಸಿಕೊಂಡು ಬಂದ ನೀತಿಪ್ರಜ್ಞೆಗೆ ? ಸ್ತ್ರೀ ಶೋಷಣೆಯ ದೃಷ್ಟಿಯಲ್ಲಿ ? ಗಂಡು ಹೆಣ್ಣಿನ ಸಂಬಂಧಗಳ ಹಿನ್ನೆಲೆಯಲ್ಲಿ ? ವೇಶ್ಯಾವಾಟಿಕೆ ಕೆಡುಕುಗಳನ್ನು ಸೃಷ್ಟಿಸುತ್ತದೆ.

ಲೈಂಗಿಕ ಕ್ರಿಯೆ ಎಂಬುದು ಆನಂದದಾಯಕವಷ್ಟೇ ಅಲ್ಲದೆ ಜೀವಸೃಷ್ಟಿಯ ಕ್ರಿಯೆಯೂ ಹೌದು. ಆ ಕಾರಣಕ್ಕಾಗಿ ಅದು

ಗೌರವಾರ್ಹ ಕ್ರಿಯೆ ಎಂದರೆ ತಪ್ಪಾಗಲಾರದು. ನಾಗರಿಕತೆಯ ಬೆಳವಣಿಗೆಯಲಲ್ಲಿ ಈ ಕ್ರಿಯೆಯಲ್ಲಿ ತೊಡುಗುವ ಗಂಡು ಹೆಣ್ಣುಗಳಿಗೆ ಒಂದು ನಿಯಮ ರೂಪಿತವಾಗಿದೆ. ಏಕೆಂದರೆ ಲೈಂಗಿಕ ಕ್ರಿಯೆ ದೇಹಗಳನ್ನು ಬೆಸೆಯುವ ಕಾರ್ಯವಷ್ಟೇ ಆಗಿರದೆ ಮನಸ್ಸುಗಳನ್ನು ಬೆಸೆಯುವ ಕಾರ್ಯವೂ ಹೌದು. ಮಾನಸಿಕವಾಗಿ ಸತಿ ಪತಿಯರು ಬೆರೆತಾಗ ಕುಟುಂಬದ ಸ್ವಾಸ್ಥ್ಯ, ಎರಡು ಕುಟುಂಬಗಳ ಸ್ವಾಸ್ಥ್ಯ, ಸಮಾಜದ ಸ್ವಾಸ್ಥ್ಯ, ಆರೋಗ್ಯ ಎಲ್ಲವೂ ಉಳಿದುಕೊಳ್ಳುತ್ತದೆ. ಅದನ್ನು ಕಾಪಾಡುವ ದೃಷ್ಟಿಯಿಂದ ವೇಶ್ಯಾವಾಟಿಕೆಗಳು ತೊಲಗಬೇಕು. ಬೌದ್ಧಿಕ ಅರಿವು, ಸತಿಪತಿಯರ ನಡುವಿನ ಪ್ರೀತಿ ಆ ಕೆಲಸವನ್ನು ಮಾಡಬಲ್ಲುದು. ಅದಕ್ಕಾಗಿ 'ಶೀಲ' ಎಂಬ ಕಲ್ಪನೆ ಗಂಡಸನ್ನು ಕೂಟ ಕಟ್ಟಿ ಹಾಕಬೇಕು. ಹೆಣ್ಣಿನ ಶೀಲಕ್ಕೆ ಎಷ್ಟು ಪಾವಿತ್ರ್ಯವಿದೆಯೋ ಅಷ್ಟೇ ಪಾವಿತ್ರ್ಯ ಗಂಡಿನ ಶೀಲಕ್ಕೂ ದೊರೆತಾಗ ಇದು ಸಾಧ್ಯವಾದೀತು.

ಎರಡನೆಯದಾಗಿ ವೇಶ್ಯಾವಾಟಿಕೆಯೆಂಬುದು ಸ್ತ್ರೀ ಶೋಷಣೆಯ ನಾನಾ ರೂಪಗಳಲ್ಲಿ ಒಂದು ರೂಪ. ಇಂಥಲ್ಲಿ ಒಬ್ಬಾಕೆ ಹೆಂಗಸಿನ ಆರ್ಥಿಕ, ಸಾಮಾಜಿಕ ಅಸಹಾಯಕತೆಯ ಕಾರಣಕ್ಕೆ ಆಕೆಯ ಭಾವನೆಗಳನ್ನೆಲ್ಲ ಹೊಸಕಿ ಹಾಕಿ ನಿರ್ದಯವಾಗಿ ಆಕೆಯ ದೇಹವನ್ನು ತಮ್ಮ ತೆವಲಿಗಾಗಿ ಬಳಸಿಕೊಳ್ಳುವಲ್ಲಿ ಎಂಥ ಕ್ರೌರ್ಯವಿದೆ ಎಂಬುದನ್ನು ಪುರುಷರು ಅರ್ಥಮಾಡಿ ಕೊಳ್ಳಬೇಕು. ಈ ಕ್ರೌರ್ಯವೆಸಗುವ ಗಂಡಸರಲ್ಲಿ ತಾವು ಮಾನವತೆಗೆ ಎಂಥ ಅಪಚಾರ ಮಾಡುತ್ತಿದ್ದೇವೆ ಎಂಬ ನೋವು ಕಾಣಿಸಬೇಕು. ಇದೆಲ್ಲ ಸಾಧ್ಯವಾದರೆ ವೇಶ್ಯಾವಾಟಿಕೆಗಳು ನಿಧಾನವಾಗಿ ಕಣ್ಮರೆಯಾದಾವು.

ಇಷ್ಟಾದ ಮಾತ್ರಕ್ಕೆ ಆರ್ಥಿಕ ಅಸಹಾಯಕರಾದ ಹೆಂಗಸರು ಬೀದಿ ಪಾಲಾಗಬೇಕಾದ್ದಿಲ್ಲ. ಅವರ ಆರ್ಥಿಕ ಅಸಹಾಯಕತೆಗೆ ಪರ್ಯಾಯ ವ್ಯವಸ್ಥೆಯನ್ನು ಮಾಡಿಕೊಡುವ ಸಾಮರ್ಥ್ಯ ಈ ಸಮಾಜಕ್ಕೆ ಖಂಡಿತವಾಗಿಯೂ ಇದೆ. ಆದರೆ ಮನುಷ್ಯತ್ವದ ಪ್ರಶ್ನೆ ಸಮಾಜವನ್ನು ಗಂಭೀರವಾಗಿ ಕಾಡಬೇಕು. ಅದಾಗದೆ ಹೋದರೆ ಜಗತ್ತಿಗೆ ಭಾರತೀಯರು ಕೊಟ್ಟ ಅಧ್ಯಾತ್ಮಿಕ ಸಂದೇಶ, ಜೀವನ ದೃಷ್ಟಿ ಸಾಂಸ್ಕೃತಿಕ ಮೌಲ್ಯ ಇವೆಲ್ಲ ನೈಜ ನೆಲೆಯಲ್ಲಿ ಅರ್ಥ ಕಳೆದುಕೊಂಡು ಬಿಡುತ್ತವೆ. ಏಕೆಂದರೆ ತನ್ನ ಸಮಾಜದ ಅಸಹಾಯಕ ಹೆಂಗಸರಿಗೆ ಬದುಕು ಕೊಡಲಾಗದ ಸಮಾಜದಲ್ಲಿ ಎಷ್ಟೇ ಮೌಲ್ಯಗಳಿದ್ದರೂ ಅವುಗಳಿಂದ ಪ್ರಯೋಜನವೇನು ?

ಇದನ್ನೆಲ್ಲ ಹೇಳಿದ ಮೇಲೆ, ಹೈಟೆಕ್ ವೇಶ್ಯಾವಾಟಿಕೆಯ ಬಗ್ಗೆ ನಾಲ್ಕು ಮಾತು ಹೇಳದಿದ್ದರೆ ಲೇಖನ ಅಪೂರ್ಣವಾಗುತ್ತದೆ. ಹೈಟೆಕ್ ವೇಶ್ಯಾವಾಟಿಕೆಗೆ ನಾಲ್ಕು ಅಂಶಗಳು ಕಾರಣವಿರಬಹುದೆನಿಸುತ್ತದೆ. ಮೊದಲನೆಯದು ಶ್ರೀಮಂತಿಕೆ, 'ಗರ ಬಡಿದವರ ನುಡಿಸಬಹುದು ಸಿರಿಗರ ಬಡಿದವರ ನುಡಿಸಲಾಗದು' ಎಂಬಂತೆ ಶ್ರೀಮಂತಿಕೆಗೆ ಬದುಕನ್ನು Materialistic ಆಗಿ ನೋಡುವುದಕ್ಕೆ ಹೆಚ್ಚಿನ ಅವಕಾಶವಿದೆ. ಎಲ್ಲ ಸುಖಗಳನ್ನು ಈ ಒಂದು ದೃಷ್ಟಿಕೋನದಲ್ಲಿಯೇ ಅಳೆಯಹೊರಟಾಗ ಆ Materialistic ಸುಖದ ನಿರಂತರ ಹುಟುಕಾಟ ನಡೆಯಬಹುದು. ಅಂಥಲ್ಲಿ ಹೈಟೆಕ್ ವೇಶ್ಯಾವಾಟಿಕೆಗಳು ಕಾಣಬಲ್ಲವು. ಇದೇ ಸುಖದ ಹುಡುಕಾಟ ನಡೆದು ಒಬ್ಬ ಸಂಗಾತಿಯ ಪ್ರೀತಿಯನ್ನೂ ಪಡೆಯಲಾರದೆ ಹೋದಾಗ ಯಾವುದೋ ಒಂದು ಹಂತದಲ್ಲಿ ಭಾವನಾತ್ಮಕ ಸುಖದ ಹುಡುಕಾಟ ನಡೆಯಬಹುದು. ಆದರೆ ಆ ಹಂತದಲ್ಲಿ ಅದು ಲಭ್ಯವಾಗದೆ ಹೋದಾಗ ಮತ್ತೆ ಪ್ರೀತಿಯ ಹುಡುಕಾಟಕ್ಕಾಗಿ ಹೈಟೆಕ್ ವೇಶ್ಯಾಟನೆ ಮುಂದುವರಿಯಬಹುದು.

ಎರಡನೆಯದು ಶ್ರೀಮಂತ ಮಹಿಳೆಯರ ಬದುಕಿನಲ್ಲಿ ಉಂಟಾಗಬಹುದಾದ ಆರ್ಥಿಕ ಕುಸಿತ. ಅದರಲ್ಲೂ ಮುಖ್ಯವಾಗಿ ಭಾವನಾತ್ಮಕವಾಗಿ ಏಕಾಂಗಿಯರಾದ ಶ್ರೀಮಂತ ಮಹಿಳೆಯರಿಗೆ ಒದಗಬಹುದಾದ ಆರ್ಥಿಕ ಕುಸಿತ. ಅಂಥಲ್ಲಿ ತಮ್ಮ ಯಾವತ್ತೂ ಸ್ಥಾನಮಾನಗಳನ್ನು ಕಳೆದುಕೊಳ್ಳಲು ಅವರು ಇಷ್ಟಪಡಲಾರರು. ಕೆಳಸ್ತರದ ದುಡಿಮೆಗಿಳಿಯಲು ಮನಸ್ಸೊಪ್ಪದು. ಅಂಥಲ್ಲಿ ಆರ್ಥಿಕ ದುಃಸ್ಥಿತಿಯಿಂದ ಹೊರಬರಲು ಇರುವ ಏಕೈಕ ಉಪಾಯವೆಂದರೆ ಹೈಟೆಕ್ ವೇಶ್ಯಾವಾಟಿಕೆ.

ಮೂರನೆಯ ಅಂಶ ಫ್ಯಾಶನ್ ಸಂಸ್ಕೃತಿ. ಅದು ವ್ಯಾಪಕವಾಗುತ್ತಿರುವಂತೆ ಲೈಂಗಿಕ ಕ್ರಿಯೆ ನಿಯಂತ್ರಣವನ್ನು ಕಳೆದುಕೊಳ್ಳುತ್ತದೆ, ಗೌರವವನ್ನು ಕಳೆದುಕೊಳ್ಳುತ್ತದೆ, ಸಂಬಂಧಗಳನ್ನು ಬೆಸೆಯುವ ಆಶಯವನ್ನು ಕಳೆದುಕೊಳ್ಳುತ್ತದೆ. ಕೇವಲ ಫ್ಯಾಶನ್ ಆಗಿ ಬಿಡುತ್ತದೆ. ಹೀಗಾದಾಗ ಮನುಷ್ಯನಲ್ಲಿ ಇರುವ ಸಹಜ ಲೈಂಗಿಕ ಬಯಕೆಗಳು ತೆವಲುಗಳಾಗಿ ಕಾಣಿಸಿಕೊಂಡು ಹೈಟೆಕ್ ವೇಶ್ಯಾಟನೆ ವಿಜೃಂಭಿಸಬಹುದು.

ನಾಲ್ಕನೆಯದಾಗಿ ನೈತಿಕ ಮೌಲ್ಯ, ಆದರ್ಶಗಳೆಲ್ಲ ಕಥೆ, ಕಾದಂಬರಿ, ಲೇಖನ, ಸಿನಿಮಾಗಳಿಗೆ ಸೀಮಿತವಾಗಿ ಸಾಮಾಜಿಕ ಬದುಕಿನಲ್ಲಿ ಕುಸಿಯುತ್ತಿದ್ದು ಅಲ್ಲಿಗೆ ಆರ್ಥಿಕ ದಾಹ ಪ್ರವೇಶಿಸುತ್ತಿರುವುದು. ಅದರಿಂದ ಸ್ವಕಾರ್ಯವನ್ನು ಸಾಧಿಸಿಕೊಳ್ಳಲು ದೇಹವನ್ನು ವಿಕ್ರಯಿಸುವ ಮಹಿಳೆಯರು, ಅವರನ್ನು ಕೊಂಡುಕೊಳ್ಳುವ ಪುರುಷರು ಕಾಣಸಿಗುತ್ತಾರೆ. ಇದು ಸಮಾಜದ ದುರ್ಬಲ ವರ್ಗದಿಂದ ಆರ್ಥಿಕ ಬಲಾಢ್ಯರಾಗಿರುವ ತನಕವೂ ಕಂಡುಬರುವ ಸಂಗತಿ. ಇದರಿಂದಾಗಿಯೂ ಹೈಟೆಕ್ ವೇಶ್ಯಾಟನೆ ನಡೆಯಬಹುದು. (ಇಲ್ಲಿ ಹೆಂಗಸನ್ನು ಬಳಸಿಕೊಳ್ಳುವವರು ಉನ್ನತ ಸ್ತರದವರಾಗಿರುವುದರಿಂದ ಈ ಅಂಶವನ್ನು ಹೈಟೆಕ್ ವೇಶ್ಯಾಟನೆಯೊಡನೆ ಹೇಳಲಾಗಿದೆ.)

ಈ ಬಗ್ಗೆ ಪುರುಷರು ಮತ್ತು ಮಹಿಳೆಯರು ಗಂಭೀರವಾಗಿ ಯೋಚಿಸಿದಷ್ಟೂ ಒಳಿತಿದೆ.

☐

೦-೬ ಮಕ್ಕಳ ಲಿಂಗ ಅನುಪಾತದಲ್ಲಿ ನಗರ-ಗ್ರಾಮೀಣ ವ್ಯತ್ಯಾಸ

ಕೋಷ್ಠಕ-೬

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	ನಗರ ಲಿಂಗ ಅನುಪಾತವು ಗ್ರಾಮೀಣ ಲಿಂಗ ಅನುಪಾತಕ್ಕಿಂತ ಎಷ್ಟು ಅಂಶ ಕಡಿಮೆಯಿದೆ	
		1991	2001
1.	ಉಡುಪಿ	-3	-3
2.	ಬಿಜಾಪುರ	-7	-72
3.	ಬಾಗಲಕೋಟೆ	-	-39
4.	ಗುಲಬರ್ಗಾ	-20	-23
5.	ಬೀದರ್	-11	-57
6.	ರಾಯಚೂರು	-12	-21
7.	ಕೊಪ್ಪಳ	-	+29
8.	ಧಾರವಾಡ	-7	-2
9.	ಗದಗ	-	-09
10.	ಹಾವೇರಿ	-	-24
11.	ಬಳ್ಳಾರಿ	-7	-17
12.	ಚಿತ್ರದುರ್ಗ	-15	+4
13.	ದಾವಣಗೆರೆ	-	13
14.	ಶಿವಮೊಗ್ಗ	-1	+3
15.	ಚಿಕ್ಕಮಗಳೂರು	-22	-10
16.	ತುಮಕೂರು	-21	-04
17.	ಕೋಲಾರ	-12	-30
18.	ಬೆಂಗಳೂರು (ನ)	-12	-20
19.	ಬೆಂಗಳೂರು (ಗ್ರಾ)	-07	-17
20.	ಮಂಡ್ಯ	-25	+37
21.	ಉತ್ತರ ಕನ್ನಡ	-12	-04
22.	ಹಾಸನ	-15	-32
23.	ದಕ್ಷಿಣ ಕನ್ನಡ	-09	+09
24.	ಉಡುಪಿ	-	+11
25.	ಕೊಡಗು	-14	+10
26.	ಮೈಸೂರು	-06	+18
27.	ಚಾಮರಾಜನಗರ	-	-06
	ಕರ್ನಾಟಕ ರಾಜ್ಯ	-12	-15

ಟಿಪ್ಪಣಿ : ನಗರದಲ್ಲಿ ಮಕ್ಕಳ ಲಿಂಗ ಅನುಪಾತವು ಗ್ರಾಮೀಣ ಮಕ್ಕಳ ಅನುಪಾತಕ್ಕಿಂತ ಕಡಿಮೆ ಇರುವುದನ್ನು (-) ವ್ಯವಕಲನ ಚಿನ್ಹೆಯು ಹಾಗೂ ಅಧಿಕವಿರುವುದನ್ನು (+) ಸಂಕಲನ ಚಿನ್ಹೆಯು ಸೂಚಿಸುತ್ತದೆ.

ನಾ ಬರಿ ಭ್ರೂಣವಲ್ಲ

– ಮಾಲತಿ ಪಟ್ಟಣಶೆಟ್ಟಿ

ಅವ್ವಾ
ನಾ ನಿನ್ನ ಮಗಳು
ದೇಹದ ಮುಗುಳು
ನಿನ್ನ ಕನಸಿನ ಅರಳವ್ವಾ ;
ನಾ ಬರಿ ಭ್ರೂಣವಲ್ಲ.

ಏ ಅವ್ವಾ
ಔಷಧಿಯೆಲ್ಲ ವಿಷವಾಗಿ
ಗುಳಿಗೆಗಳೆಲ್ಲ ನಶೆಯಾಗಿ
ಪಾಶವಾಗಿದೆಯವ್ವ ನನ್ನುಸಿರಿಗೆ !
ನಾ ಬರಿ ಭ್ರೂಣವಲ್ಲ.

ಏಕವ್ವಾ
ಯಾರದ್ಯಾಕವ್ವಾ ಒತ್ತಾಸೆ
ಮೇಲೆ ನಿನ್ನ ನಿರಾಸೆ,
ಗಾಬರಿಗೊಂಡಿದ್ದೇನವ್ವಾ;
ನಾ ಬರಿ ಭ್ರೂಣವಲ್ಲ.

ನನ್ನವ್ವ,
ಗೊತ್ತಿಲ್ಲವೆ ಮಗಳ ರಕ್ತ
ರಕ್ತವಲ್ಲ, ಪ್ರೀತಿ ರಸವೆ
ನಿನ್ನವ್ವನಾಗಿಯೇ ಬರುವನೆ
ನಾ ಬರಿ ಭ್ರೂಣವಲ್ಲ.

ಏ ಅವ್ವ
ನನ್ನ ಜಗತ್ತೆ ಪುಟ್ಟದು
ಕರಿಯುಗುರು ಬೆನ್ನಟ್ಟಿಯಲ್ಲೆ?
ಚಿಂತಿಸಿ ನಾ ಕೆಟ್ಟೆನವ್ವ
ನಾ ಬರಿ ಭ್ರೂಣವಲ್ಲ.

ಕೇಳವ್ವ
ಕಂಡಿಲ್ಲ ನಾನಿನ್ನೂ
ಬದುಕಿನಾಗಸದ ನೀಲ
ಪಚ್ಚೆಯಂಥ ನೆಲ
ಗಾಳಿಯ ಮೃದು ಸ್ಪರ್ಶ
ನಾ ಬರಿ ಭ್ರೂಣವಲ್ಲ.

ನನ್ನ ಹಡೆದವ್ವ
ನಿನ್ನ ಮೈ ಗಂಧದಿಂದ
ಕಿತ್ತುಕೊಂಡರೆ ನಾಸತ್ತೆನವ್ವಾ !
ಚೆಲ್ಲ ಬೇಕೆ ಉಡಿಯ ಮುತ್ತು?
ನಾ ಬರಿ ಭ್ರೂಣವಲ್ಲ.

ನನ್ನ ಮುದ್ದಿನವ್ವ
ವರವ ಕೊಡುತಾಯಿ
ನನ್ನ ಉಸಿರಿಗೆ
ನಿನ್ನ ಬಾಳ ಹಸಿರಿಗೆ
ಹೂ ತರುವೆನೇ ನಿನ್ನ ಹೆಸರಿಗೆ
ನಾ ಬರಿ ಭ್ರೂಣವಲ್ಲ.

ಸಾಧನೆಗೆ ಸ್ಫೂರ್ತಿ ತುಂಬಿದ ದಿನಗಳಿವು ಪ್ರಗತಿಯ ಪಥದಲ್ಲಿ ಕರ್ನಾಟಕ

- ಸಿಇಟಿ ಸಮಸ್ಯೆಗೆ ಸಂಧಾನ ಮೂಲಕ ಪರಿಹಾರ. ಈ ಸಮಸ್ಯೆಗೆ ಶಾಶ್ವತ ಪರಿಹಾರವಾಗಿ ಕೇಂದ್ರ ವಿಧೇಯಕಗಾಗಿ ಆಗ್ರಹಿಸಿ ಪ್ರಧಾನಿ ಬಳಿ ಸರ್ವ ಪಕ್ಷಗಳ ನಿಯೋಗ. ರಾಜ್ಯದಲ್ಲಿ ಇದಕ್ಕಾಗಿ ಪ್ರತ್ಯೇಕ ಶಾಸನ.

  ವೃತ್ತಿ ಶಿಕ್ಷಣದ ಬೇಡಿಕೆಯನ್ನು ಬೀದರ್, ರಾಯಚೂರು, ಹಾಸನ, ಮಂಡ್ಯ ಮತ್ತು ಬೆಳಗಾವಿಯಲ್ಲಿ ಐದು ಹೊಸ ಸರ್ಕಾರಿ ವೈದ್ಯಕೀಯ ಕಾಲೇಜುಗಳು ಹಾಗೂ ಹುಬ್ಬಳ್ಳಿ, ಬಳ್ಳಾರಿ ಮತ್ತು ಮೈಸೂರಿನಲ್ಲಿ 3 ದಂತ ವೈದ್ಯಕೀಯ ಕಾಲೇಜುಗಳ ಆರಂಭಕ್ಕೆ ಚಿಂತನೆ.

- ಹೈದರಾಬಾದ್ ಕರ್ನಾಟಕದ ಸಮಗ್ರ ಅಭಿವೃದ್ಧಿಗಾಗಿ ಆ ಪ್ರದೇಶಕ್ಕೆ ವಿಶೇಷ ಸ್ಥಾನಮಾನ ನೀಡಲು ಸಂವಿಧಾನದ 371ನೇ ವಿಧೇಯಕ್ಕೆ ತಿದ್ದುಪಡಿ ತರಲು ಸರ್ವಪಕ್ಷ ನಿಯೋಗದ ಮೂಲಕ ಕೇಂದ್ರದ ಮೇಲೆ ಒತ್ತಡ. ರಾಜ್ಯದ ಹಿಂದುಳಿದ ಪ್ರದೇಶಗಳ ಅಭಿವೃದ್ಧಿಗಾಗಿ ಈ ವರ್ಷ ಒಟ್ಟಾರೆ ಬಜೆಟಿನ ಶೇ. 54ರಷ್ಟು ಅನುದಾನ ಮೀಸಲು.

- ರೈತರಿಗೆ ಸಬ್ಸಿಡಿ ದರದಲ್ಲಿ ಬೀಜಗಳ ಪೂರೈಕೆ. ರೂ. 68 ಕೋಟಿ ವೆಚ್ಚ

- ಬೆಂಗಳೂರಿನ ಅರ್ಕಾವತಿ ಬಡಾವಣೆಯಲ್ಲಿ 20,000 ನಿವೇಶನಗಳ ಹಂಚಿಕೆಗೆ ಕ್ರಮ.

- ಬೀದರಿನ ಪಶು ವೈದ್ಯಕೀಯ ವಿಶ್ವವಿದ್ಯಾಲಯಕ್ಕೆ ಉಪಕುಲಪತಿಗಳ ನೇಮಕ.

- ಕಾರ್ಯಪ್ರಗತಿಯಲ್ಲಿರುವ ಎಲ್ಲಾ ನೀರಾವರಿ ಕಾಮಗಾರಿಗಳು ಡಿಸೆಂಬರ್ 2005ರೊಳಗಾಗಿ ಪೂರ್ಣ.

- ಕೃಷಿ ಕ್ಷೇತ್ರದ ಅಭಿವೃದ್ಧಿಗಾಗಿ ಬಜೆಟ್ ಅನುದಾನದಲ್ಲಿ ರೂ. 412 ಕೋಟಿಯಿಂದ ರೂ. 840 ಕೋಟಿಗೆ ಹೆಚ್ಚಳ. ಬೆಳೆ ವಿಮೆಗಾಗಿ ರೂ. 241 ಕೋಟಿ ಮೀಸಲು.

- ಸಾಮಾನ್ಯ ಕನಿಷ್ಠ ಕಾರ್ಯಕ್ರಮದಲ್ಲಿ ಆಶ್ವಾಸನೆ ನೀಡಿದ್ದಂತೆ ದುರ್ಬಲ ಮತ್ತು ಆರ್ಥಿಕವಾಗಿ ಹಿಂದುಳಿದ ವರ್ಗಗಳ ಪ್ರತಿ ಕುಟುಂಬಕ್ಕೆ ಪ್ರತಿ ಕೆ.ಜಿ.ಗೆ ರೂ. 3.00 ರಂತೆ 20 ಕೆ.ಜಿ. ಅಕ್ಕಿ ಮತ್ತು ಗೋಧಿ ಪೂರೈಕೆ.

- ವಾರ್ಷಿಕ ರೂ. 300 ಕೋಟಿ ಆದಾಯ ತರುತ್ತಿದ್ದ ಆನ್‌ಲೈನ್ ಲಾಟರಿ ಮತ್ತು ಮಟ್ಕಾಗಳನ್ನು ಜನಸಾಮಾನ್ಯರ ಹಿತದೃಷ್ಟಿಯಿಂದ ನಿಷೇಧ.

- 7ನೇ ತರಗತಿಯವರಿಗೆ "ಅಕ್ಷರ ದಾಸೋಹ" ಕಾರ್ಯಕ್ರಮದ ವಿಸ್ತರಣೆ. ರೂ. 260 ಕೋಟಿ ಅನುದಾನ. 25 ಲಕಚ್ಚ ಮಕ್ಕಳು ಫಲಾನುಭವಿಗಳು.

- ಅಲ್ಪಸಂಖ್ಯಾತರ ಅಭಿವೃದ್ಧಿಗಾಗಿ ಪ್ರಥಮ ಬಾರಿಗೆ ಪ್ರತ್ಯೇಕ ಸಚಿವಾಲಯ ಸ್ಥಾಪನೆ.

  ಹಿಂದುಳಿದ ವರ್ಗಗಳ ಸ್ವಯಂ ಉದ್ಯೋಗಕ್ಕಾಗಿ ರೂ. 20 ಕೋಟಿ ವೆಚ್ಚದ ಶ್ರಮ ಶಕ್ತಿ ಯೋಜನೆ.

- ಮಂಗಳೂರಿನಲ್ಲಿ ರೂ. 25000 ಕೋಟಿ ಮೌಲ್ಯದ ಪೆಟ್ರೋಕೆಮಿಕಲ್ಸ್ ಘಟಕ ಸ್ಥಾಪಿಸುವ ದಿಸೆಯಲ್ಲಿ ಒಎನ್‌ಜಿಸಿಯೊಂದಿಗೆ ಒಡಂಬಡಿಕೆ.

- ಮಂಗಳೂರು-ಹಾಸನ-ಬೆಂಗಳೂರು-ಚೆನ್ನೈ ಮಾರ್ಗದಲ್ಲಿ ಕೊಳವೆ ಮೂಲಕ ಅನಿಲ ಪೂರೈಕೆಗೆ ಯೋಜನೆ.

- ನಕ್ಸ್‌ಲೈಟ್ ಸಮಸ್ಯೆಗೆ ಮಾತುಕತೆ ಮೂಲಕ ಪರಿಹಾರಕ್ಕೆ ಯತ್ನ.

ಜನ ಮಾನಸಕ್ಕೆ ಪ್ರತಿ ದಿನ ಸ್ಪಂದನ

ಕರ್ನಾಟಕ ವಾರ್ತೆ.

ಈಕೆಯೂ ಆದರ್ಶವಾಗಿದ್ದಾಳೆ !

'ನ್ಯೂಯಾರ್ಕ್ ಟೈಮ್ಸ್'ನ ಅತ್ಯಧಿಕ ಮಾರಾಟವಾಗುತ್ತಿರುವ ಪುಸ್ತಕಗಳ ಪಟ್ಟಿಯಲ್ಲಿ ತಿಂಗಳುಗಳಿಂದ ಸ್ಥಿರವಾಗಿ ಉಳಿದಿರುವ ಪುಸ್ತಕ ಯಾವುದು ಗೊತ್ತೇ? ಅದು ಜೆನ್ನಾ ಜೇಮ್ಸನ್ ಎಂಬಾಕೆಯ 'ಹೌ ಟು ಮೇಕ್ ಲವ್ ಲೈಕ್ ಎ ಪೋರ್ನ್ ಸ್ಟಾರ್' ಎಂಬ ಪುಸ್ತಕ. 600 ಪುಟಗಳ ಈ ಪುಸ್ತಕ ಎಲ್ಲಿಲ್ಲದಂತೆ ಮಾರಾಟವಾಗುತ್ತಾ ಹಣ ಮತ್ತು ಪ್ರಸಿದ್ಧಿಯನ್ನು ಥಟ್ಟನೆ ಈ ಮಹಿಳೆಗೆ ತಂದು ಕೊಟ್ಟಿದೆ. ಯಾವ ಕಾರಣಕ್ಕಾಗಲಿ, ಯಾವ ಹಾದಿಯಲ್ಲಾಗಲಿ ಹಣ ಮತ್ತು ಪ್ರಸಿದ್ಧಿ ಬಂತೆಂದರೆ, 'ಅಮೆರಿಕನ್ ಕನಸು' ನನಸಾದಂತೆ.

30 ವರ್ಷದ ಜೆನ್ನಾ ಅಮೆರಿಕಾದ ಓರ್ವ ಪೋರ್ನ್ ಸ್ಟಾರ್. 'ಮಹಿಳೆಯರು ನನಗೆ ಹೇಳುತ್ತಾರೆ... ನಾನವರ ಆದರ್ಶವೆಂದು. ಅವರು ನನ್ನಂತೆ ಆಗಲು ಇಷ್ಟ ಪಡುತ್ತಾರೆ' ಜೆನ್ನಾ ಬರೆದಿದ್ದಾಳೆ! ಲಾಸ್ ವೇಗಸನಲ್ಲಿ ಹುಟ್ಟಿದ ಜೆನ್ನಾ, ಹದಿನೇಳನೇ ವಯಸ್ಸಿಗೇ ಅಶ್ಲೀಲ ಪ್ರದರ್ಶನಗಳ ಜಗತ್ತನ್ನು ಪ್ರವೇಶಿಸಿದಳು. 'ನನ್ನ ಕೆಲಸವನ್ನು ನಾನು ಬಹುವಾಗಿ ಇಟಪಡುತ್ತೇನೆ' ಎಂದು ಸಾರಿರುವ ಈಕೆಯ ಈ ಆತ್ಮಚರಿತ್ರೆಯನ್ನು, ಅದಾಗಲೇ ಹಾಲಿವುಡ್ ಆತುರದಿಂದ ಕೊಂಡು ಭರ್ಜರಿ ಚಿತ್ರವಾಗಿಸಲು ಹೊರಟಿದೆ.

ಜೆನ್ನಾ ಸದ್ಯಕ್ಕೆ 'ಅಮೆರಿಕನ್ ಕನಸು'. ಆದರೆ ನಮ್ಮ ನಡುವೆಯೇ ಜೆನ್ನಾಳ ಅರ್ಧ ವಯಸ್ಸೂ ಇಲ್ಲದ ಹೆಣ್ಣು ಮಕ್ಕಳು, ಹೇಗಾದರೂ ಸರಿ ಪ್ರಸಿದ್ಧರಾಗಬೇಕು ಎಂದು ಹೊರಟಿದ್ದಾರೆಂದು ನಿಮಗೆ ಗೊತ್ತೆ ? ಜಮ್ಮುವಿನ ಅನಾರಾ ಗುಪ್ತಾ ಹದಿನೈದನೆ ವಯಸ್ಸಿಗೇ ಸೌಂದರ್ಯ ಸ್ಪರ್ಧೆಯಲ್ಲಿ ಭಾಗವಹಿಸಿದಳು, ಕಿರೀಟ ಗೆದ್ದಳು. ಶಾಲೆಯಲ್ಲಿ ಓದಿನಲ್ಲಿ ಮುಂದಿದ್ದ ಹುಡುಗಿ, ಓದು ಬಿಟ್ಟಳು. ಮಿಸ್ ಜಮ್ಮು ಸ್ಪರ್ಧೆಯನ್ನು ನಿಯೋಜಿಸಿದ್ದ ನರಿಂದರ್ ಕೊಹ್ಲಿ ಈಕೆಗೆ ಬಾಲಿವುಡ್‌ನಲ್ಲಿ 'ನಾಯಕಿ'ಯಾಗಿಸುತ್ತೇನೆ ಎಂದು ಉಬ್ಬಿಸಿ, ಆಸೆ ತೋರಿಸಿದ. ಈಕೆ ಅವನ ಪೋರ್ನ್ ಚಿತ್ರಗಳಿಗೆ ಶೂಟಿಂಗ್ ಮಾಡಿದಳು. ಒಂದಿಷ್ಟು ಮಾಡಲಿಂಗ್ ಮಾಡಿ, ದೂರದರ್ಶನದಲ್ಲಿ ಕಾಣಿಸಿಕೊಂಡದ್ದುಂಟು. ಆದರೆ ಅವೆಲ್ಲ ಬಹುಶಃ ಬಲು ನಿಧಾನದ ಹಾದಿಯಾಗಿ ಕಂಡಿರಬೇಕು, ಏಕದಂ ನಾಯಕಿಯಾಗುವ ಗ್ಲಾಮರ್ ಜಗತ್ತು ಎಳೆಯ ಹುಡುಗಿಯರನ್ನು ಆಕರ್ಷಿಸಿದರೆ ಏನು ಅಚ್ಚರಿ. ಇಂದು ಪೋಲೀಸರ ಸೆರೆಗೆ ಸಿಕ್ಕಿಬಿದ್ದಿದ್ದಾಳೆ ಅನಾರಾ ಗುಪ್ತಾ. ಹದಿನಾರನೆ ವಯಸ್ಸಿಗೆ ಬಟ್ಟೆ ಬಿಚ್ಚಿ ಅಶ್ಲೀಲ ಚಿತ್ರಗಳಲ್ಲಿ ಒಂದಿಷ್ಟೂ ಅಳುಕಿಲ್ಲದೆ ಅಭಿನಯಿಸಿದ ಹುಡುಗಿ, ಇಂದು ಕ್ಯಾಮರಾದೆದುರು ಮುಖ ಮುಚ್ಚಿಕೊಂಡು 'ತನ್ನ ಮೇಲೆ ಆದ ಅನ್ಯಾಯದ ವಿರುದ್ಧ ಹೋರಾಡಲು' ಸಮರ ಸಾರಿದ್ದಾಳೆ. 'ತನ್ನ ಓದು ಮುಂದುವರೆಸಿ, ತಾನು ಮೇಲೇರುತ್ತೇನೆಂದು ಶಪಥ' ತೊಟ್ಟಿದ್ದಾಳೆ. 'ಸೌಂದರ್ಯದಲ್ಲಿ ಏನೂ ಇಲ್ಲ, ಅದೆಲ್ಲ ಕೇವಲ ಪ್ರದರ್ಶನ' ಎಂಬ ನುಡಿಮುತ್ತುಗಳನ್ನು ಉದುರಿಸುತ್ತಿದ್ದಾಳೆ. ಈಕೆಯ ತಾಯಿ ಸರಕಾರಿ ಶಾಲೆಯಲ್ಲಿ ಪ್ರಾಧ್ಯಾಪಕಿ. ಕುಟುಂಬದ ಗೌರವವೇ ಸರ್ವಸ್ವ ಎಂದು ಬಗೆದ ಮಧ್ಯಮ ವರ್ಗದ ವಿದ್ಯಾವಂತ ತಂದೆ-ತಾಯಿಯರು, ಹದಿನೈದರ ವರ್ಷಕ್ಕೇ ಸೌಂದರ್ಯ ಸ್ಪರ್ಧೆಗಳಿಗೆ ಮಕ್ಕಳನ್ನು ಏಕೆ ಕಳುಹಿಸುತ್ತಾರೆ, ಅಷ್ಟು ಚಿಕ್ಕ ಹುಡುಗಿ ಎಂಥಾ ಚಿತ್ರಗಳಿಗೆ ಶೂಟ್ ಮಾಡುತ್ತಿದ್ದಾಳೆ ಎಂಬ ಆತಂಕ ಅವರಿಗಿಲ್ಲವೆ - ನೂರು ಪ್ರಶ್ನೆಗಳು ಏಳುತ್ತವೆ. ಇಂದು ಸೌಂದರ್ಯ ಸ್ಪರ್ಧೆಗಳು ಹಣ ಗಳಿಕೆಯ ಬಲು ಸುಲಭ ಮಾರ್ಗಗಳಾಗಿವೆ. ಹಾಗೆಂದೇ ಗಲ್ಲಿಗೊಂದು, ಬೀದಿಗೊಂದು, ಬಡಾವಣೆಗೊಂದು ಸ್ಪರ್ಧೆ ಏರ್ಪಡಿಸಿ, ಎಳೆಯ ಹುಡುಗಿಯರಿಗೆ ಬಾಲಿವುಡ್ ಆಕರ್ಷಣೆ ತೋರಿಸಿ, ಸೆಳೆಯುವ ಜನರೇನೂ ಕಡಿಮೆ ಇಲ್ಲ. ಆದರೆ ವಿದ್ಯಾವಂತ ತಂದೆ ತಾಯಿಯರು ಕೊಂಚವೂ ಎಚ್ಚರಿಕೆ ಇಲ್ಲದೆ, ತಮ್ಮ ಮಕ್ಕಳನ್ನು ಇಂತಹ ಕೂಪಗಳಿಗೆ ನೂಕುತ್ತಿರುವುದೇ ಆತಂಕದ ವಿಷಯ.

ಒಂದು ಕಾಲಕ್ಕೆ, ತಮ್ಮ ಹೆಣ್ಣು ಮಕ್ಕಳು ಮೊಣಕಾಲ ಮೇಲೆ ಲಂಗ ಹಾಕಲೂ ಬಿಡದಿದ್ದ ಮಧ್ಯಮ ವರ್ಗವಿದು. ಈಜುಕೊಳದಲ್ಲೂ ಈಜು ಉಡುಪು ತೊಡಲು ಅನುಮತಿ ನೀಡದಿದ್ದ ಮಧ್ಯಮ ವರ್ಗದ ತಾಯ್ತಂದೆಯರು ಅದಾಗಲೇ, ಸೌಂದರ್ಯ ಸ್ಪರ್ಧೆಗಳ ಹೆಸರಿನಲ್ಲಿ ಹಣ ಮತ್ತು ಕಿರೀಟ ಗೆಲ್ಲಲು, ತುಂಡು ಬಟ್ಟೆಯಲ್ಲಿ ತಮ್ಮ ಹೆಣ್ಣು ಮಕ್ಕಳನ್ನು ವೇದಿಕೆಯ ಮೇಲೆ ಹೆಮ್ಮೆಯಿಂದ ನಿಲ್ಲಿಸುತ್ತಿದ್ದಾರೆ. ಹಣದ ರುಚಿ ಹತ್ತಿದ 'ಕೊಳ್ಳುಬಾಕ' ಸಮಾಜದ ಹೊಸ ಪೀಳಿಗೆಯ ಅದೆಷ್ಟೋ ಮಕ್ಕಳು, ಸ್ವಇಚ್ಛೆಯಿಂದ ಕಾಲಗರ್ಲ್ಸ್ ಆಗುತ್ತಿದ್ದಾರೆ. ಸಿಕ್ಕಿಬಿದ್ದ ಮೇಲೆ ಮುಖ ಮುಚ್ಚಿಕೊಳ್ಳುವ ಅನಾರಾ ಗುಪ್ತಾಳಂತಹ ಹೆಣ್ಣು ಮಕ್ಕಳು, ಜೆನ್ನಾಳಿಂದ ಸ್ಫೂರ್ತಿ ಪಡೆದು, ಮುಂದೊಂದು ದಿನ ಹೆಮ್ಮೆಯಿಂದ ತಮ್ಮ ಕೆಲಸದ ಬಗ್ಗೆ ಹೇಳಿಕೊಳ್ಳುವ ದಿನವನ್ನೂ ನಾವು ಕಾಣಬೇಕಾಗಬಹುದು. ಕೊಳ್ಳು ಬಾಕತನಕ್ಕೆ ಕಡಿವಾಣ ಹಾಕಬೇಕಿದೆ, ಸೌಂದರ್ಯ ಸ್ಪರ್ಧೆಗಳ ಹೆಸರಲ್ಲಿ ನಡೆಯುತ್ತಿರುವ ಅವ್ಯವಹಾರಗಳತ್ತ ಎಚ್ಚರಿಕೆಯ ಕ್ರಮ ಕೈಗೊಳ್ಳಬೇಕಿದೆ. ನಮ್ಮ ಎಳೆಯ ಮಕ್ಕಳ ಎದುರು ಗುರು ಹಿರಿಯರು, ತಾಯ್ತಂದೆಯರು ಸರಿಯಾದ ಮಾದರಿಗಳನ್ನು, ಆದರ್ಶಗಳನ್ನು ನಿಲ್ಲಿಸದೆ ಹೋದರೆ, ಇಡೀ ಸಮಾಜದ ದೈಹಿಕ ಮತ್ತು ಮಾನಸಿಕ ಸ್ವಾಸ್ಥ್ಯ ನಶಿಸಿ ಹೋಗುವ ಸಂಭವವಿದೆ.

ಹೆಣ್ಣು ಭ್ರೂಣಹತ್ಯೆ

– ಡಾ॥ ಪ್ರಕಾಶ್ ಸಿ. ರಾವ್

ನಾನು ವೈದ್ಯಕೀಯ ವ್ಯಾಸಂಗ ಮಾಡುತ್ತಿದ್ದಾಗ ಸಮುದಾಯ ಆರೋಗ್ಯದ ಬಗ್ಗೆ ಕೆಲವು ವಿಷಯಗಳನ್ನು ತಿಳಿಸಿಕೊಡಲಾಗಿತ್ತು. ಆದರೆ ಸಮಾಜ ಹಾಗೂ ಸಾಮಾಜಿಕ ಪಿಡುಗುಗಳ ಬಗ್ಗೆ (ವರದಕ್ಷಿಣೆ ಸಾವುಗಳು, ಸ್ತ್ರೀ ಭ್ರೂಣಹತ್ಯೆ ಇತ್ಯಾದಿ) ಏನನ್ನೂ ತಿಳಿಸಿಯೇ ಇರಲಿಲ್ಲ. ಕ್ರಮೇಣ ವೈದ್ಯಕೀಯ ಪುಸ್ತಕಗಳೊಂದಿಗೆ, ಸಮಾಜದ ಅನೇಕ ವಿಷಯಗಳನ್ನು ತಿಳಿದುಕೊಳ್ಳಲು ಪ್ರಯತ್ನಿಸಿದಾಗ ಗೊತ್ತಾದ ಅನೇಕ ವಿಷಯಗಳಲ್ಲಿ ಸ್ತ್ರೀ ಶೋಷಣೆ ಮುಖ್ಯವಾದುದು.

ಸ್ತ್ರೀ ಶೋಷಣೆಯ ಹಲವಾರು ಮುಖಗಳನ್ನು ನಾವು ನಮ್ಮ ಸಮಾಜದಲ್ಲಿ ಕಾಣಬಹುದಾಗಿದೆ. ವರದಕ್ಷಿಣೆ ಸಾವು, ಲಿಂಗ ಸಮಾನತೆ ಇಲ್ಲದಿರುವುದು ಇತ್ಯಾದಿ ಇತ್ಯಾದಿಗಳ ವಿರುದ್ಧ ಮಹಿಳೆಯರಲ್ಲಿ ಕೆಲವರು, ಸಾಮಾಜಿಕ ಕಳಕಳಿ ಇರುವವರು ಈ ಶೋಷಣೆಯ ವಿರುದ್ಧ ಹೋರಾಡುತ್ತಾ ಬಂದಿದ್ದಾರೆ.

ನಮ್ಮ ಸಮಾಜದಲ್ಲಿ ಹೆಣ್ಣು ಮಗು ಹುಟ್ಟುವುದೆಂದರೆ ಮನೆಯೊಳಗೆ ಪೀಡೆ ಬಂದಂತೆ. 'ನಮಗೆ ಗಂಡು ಮಗು ಬೇಕು' ಎನ್ನುವ ಮಾತುಗಳು ಸಾಮಾನ್ಯ. ಇದಲ್ಲದೆ ಸ್ತ್ರೀ ಶಿಶು ಹತ್ಯೆಯ ಪರಿಪಾಠ ಅನೇಕ ಶತಮಾನಗಳಿಂದಲೂ ವ್ಯಾಪಕವಾಗಿ ಬೆಳೆದು ಬಂದಿದೆ. ಹೆಣ್ಣು ಅನೇಕ ತರಹದ ಲಿಂಗ ತಾರತಮ್ಯಗಳಿಗೆ ಬಲಿಯಾಗುತ್ತಾ ಬಂದಿದ್ದಾಳೆ. ನಮ್ಮ ಸಮಾಜ ಪುರುಷಪ್ರಧಾನ ಸಮಾಜವಾದ್ದರಿಂದ ಸ್ತ್ರೀ ಶಿಶುವಿನ ನಿರ್ಲಕ್ಷ್ಯ, ಮಹಿಳೆಯ ಮೇಲೆ ದೌರ್ಜನ್ಯ, ವರದಕ್ಷಿಣೆ ಕಿರುಕುಳ ಹಾಗೂ ಸಾವು ಮುಂತಾದವುಗಳನ್ನು ಪ್ರತಿನಿತ್ಯ ಪತ್ರಿಕೆಗಳಲ್ಲಿ ಓದುತ್ತಿರುತ್ತೇವೆ.

ಇತ್ತೀಚೆಗೆ (1960) ವಿಜ್ಞಾನದ ಆವಿಷ್ಕಾರದಿಂದ ಗರ್ಭದೊಳಗಿನ ಭ್ರೂಣ ಪರೀಕ್ಷೆ ಸಾಧ್ಯವಾಯಿತು. ಭ್ರೂಣಕ್ಕೆ ಉಂಟಾಗುವ ರೋಗವನ್ನು ಮೊದಲೇ ಕಂಡುಹಿಡಿದಲ್ಲಿ ಕೆಲವು ಭೀಕರ ಕಾಯಿಲೆಗಳನ್ನು ತಡೆಯಬಹುದಾಗಿದ್ದಿತು. ಭ್ರೂಣವನ್ನು ತೆಗೆಯಲು ಗರ್ಭಪಾತ ಮಾಡುವ ತಂತ್ರಜ್ಞಾನವೂ ರೂಪುಗೊಂಡಿತು. ಅದೇ ವೇಳೆಗೆ ಗರ್ಭಜಲ ತೆಗೆದು (ಅಮ್ನಿಯೋಸೆಂಟಿಸಿಸ್) ಪರೀಕ್ಷೆ ಮಾಡಿ ಭ್ರೂಣದ ಲಿಂಗ ನಿರ್ಧರಿಸುವ ತಂತ್ರಜ್ಞಾನ ಲಭ್ಯವಾಯಿತು. ತಂತ್ರಜ್ಞಾನವನ್ನು ಆಧುನಿಕ ರೋಗ ಕಂಡುಹಿಡಿಯಲು ಉಪಯೋಗಿಸುವುದರ ಬದಲು ಗರ್ಭಪಾತ ಮಾಡಿಸಲು ಉಪಯೋಗಿಸುವುದೇ ತಂತ್ರಜ್ಞಾನ ದುರ್ಬಳಕೆ ಎನ್ನಬಹುದಾಗಿದೆ.

ಭಾರತದಲ್ಲಿ ಮೊದಲ ಬಾರಿಗೆ ಪಂಜಾಬಿನಲ್ಲಿ ಹೆಣ್ಣು ಭ್ರೂಣವಿದೆಯೇ ಎಂದು ತಿಳಿಸುವ ಪರೀಕ್ಷಾ ಕೇಂದ್ರಗಳು ಪ್ರಾರಂಭವಾದವು. ವ್ಯಾಪಕವಾದ ಜಾಹಿರಾತನ್ನೂ ಕೊಡಲಾಯಿತು. ಈ ಪರೀಕ್ಷಾ ವಿಧಾನ ಅಷ್ಟೇನೂ ಸುಲಭವಾಗಿರದಿದ್ದರೂ, ನೋವು ರಹಿತವಾಗಿಲ್ಲದಿದ್ದರೂ, ಜನರು ಹೆಣ್ಣು ಭ್ರೂಣ ಕಂಡುಹಿಡಿಯಲು ಈ ಕೇಂದ್ರಗಳಿಗೆ ಬರಲಾರಂಭಿದರು.

ವಿಜ್ಞಾನದ ಆವಿಷ್ಕಾರ ನಿಲ್ಲುವಂತಹುದಲ್ಲ. ಇದೇ ವೇಳೆಗೆ ಜಾರಿಗೆ ಬಂದ ಇನ್ನೊಂದು ಆವಿಷ್ಕಾರ 'ಅಲ್ಟ್ರಾಸೌಂಡ್'. ಶಬ್ದದ ಅಲೆಗಳನ್ನು ದೇಹದ ಒಳಗಿನ ಅಂಗಾಂಗಗಳ ಮೇಲೆ ಅಪ್ಪಳಿಸುವಂತೆ ಮಾಡಿ ದೇಹದ ಅಂಗಾಂಗಗಳ ರೋಗ ಕಂಡು ಹಿಡಿಯಲು ಅಲ್ಟ್ರಾಸೌಂಡ್‌ನಿಂದ ಸಾಧ್ಯವಾಯಿತು. ಶಬ್ದದ ಅಲೆಗಳನ್ನು ಭ್ರೂಣದ ಮೇಲೆ ಅಪ್ಪಳಿಸುವಂತೆ ಮಾಡಿದಾಗ ಭ್ರೂಣದ ಲಿಂಗವನ್ನು ಕಂಡುಹಿಡಿಯಲು ಸಾಧ್ಯವಾಗುತ್ತದೆ. ಈ ಆವಿಷ್ಕಾರ ಅಮ್ನಿಯೋಸೆಂಟಿಸಿಸ್ ವಿಧಾನಕ್ಕಿಂತ ಹೆಚ್ಚು ಸುಲಭ, ಅಪಾಯರಹಿತ, ಶೀಘ್ರ ನೋವು ರಹಿತ ವಿಧಾನವಾಗಿದ್ದುದರಿಂದ ಮೊದಲಿಗಿಂತಲೂ ಹೆಚ್ಚು ಜನರು ಲಿಂಗ ನಿರ್ಧಾರ ಆಧಾರಿತ, ಗರ್ಭಪಾತವನ್ನು ಮಾಡಿಸಲು ಮುಂದಾದರು. ಇದನ್ನೂ ವೈದ್ಯಕೀಯ ವಿಜ್ಞಾನದ ದುರ್ಬಳಕೆಯೆಂದೇ ಹೇಳಬಹುದು.

ವಿಜ್ಞಾನದ ಮುನ್ನಡೆತೆಯಂತೆಯೇ ತಂತ್ರಜ್ಞಾನ ಮುನ್ನಡೆಯಿಂದ 1990ರ ಸುಮಾರಿಗೆ ಮಹಿಳೆ ಭ್ರೂಣ ಪರೀಕ್ಷೆ ಮಾಡಿಸಿಕೊಳ್ಳಲು ಮೊಬೈಲ್ ಅಲ್ಟ್ರಾಸೌಂಡ್ ಉಪಕರಣ ಲಭ್ಯವಾಯಿತು. ಮಹಿಳೆಗೆ ದೂರದ ಪಟ್ಟಣಕ್ಕೆ ಹೋಗುವ ಅವಶ್ಯಕತೆ ಇಲ್ಲವಾಯಿತು. ಸಣ್ಣ ಅಲ್ಟ್ರಾಸೌಂಡ್ ಉಪಕರಣಗಳನ್ನು ವೈದ್ಯರು ತಮ್ಮ ಕಾರುಗಳಲ್ಲಿಯೇ ಇಟ್ಟುಕೊಂಡು ಬೇರೆ ಬೇರೆ ಊರುಗಳಿಗೆ ಹೋಗಿ ಭ್ರೂಣ ಪರೀಕ್ಷೆ ಮಾಡಿ, ಹೆಚ್ಚು ಹೆಚ್ಚು ಭ್ರೂಣಹತ್ಯೆಗೆ ಕಾರಣವಾದರು.

ಈಗ ಗ್ರಾಮೀಣ ಹಾಗೂ ನಗರ ಪ್ರದೇಶಗಳಲ್ಲಿ ಈ ಪರೀಕ್ಷಾ ಸೌಲಭ್ಯಗಳು ಲಭ್ಯವಿದೆ ಹಾಗೂ ಈ ಪರೀಕ್ಷಾ ವಿಧಾನದ ಸಹಾಯದಿಂದ ಹೆಣ್ಣು ಭ್ರೂಣಹತ್ಯೆ ನಿರಂತರವಾಗಿ ಸಾಗಿದೆ.

ಇದರಿಂದೇನು ಅಪಾಯ

ನಿಸರ್ಗ ಜೀವರಾಶಿಗಳ ಸಮತೋಲನವನ್ನು ಕಾಪಾಡುತ್ತಾ ಬಂದಿದೆ. ಅದರಿಂದಾಗಿಯೇ ಇಂದು ಹೆಣ್ಣು ಗಂಡುಗಳ ಸಂಖ್ಯೆ ಸುಮಾರು ಒಂದೇ ಆಗಿದೆ. ಆದರೆ ಹೆಣ್ಣು ಗರ್ಭಪಾತದಿಂದ ಹೆಣ್ಣು ಮಕ್ಕಳ ಸಂಖ್ಯೆ ಕಡಿಮೆಯಾಗುತ್ತದೆ. ನಮ್ಮ ದೇಶದಲ್ಲಿ 1901 ಜನಗಣತಿಯಲ್ಲಿ ಸುಮಾರು 1000 ಗಂಡಸರಿಗೆ 961 ಹೆಣ್ಣು ಮಕ್ಕಳಿದ್ದರು. ಆದರೆ 2001ರ ಸುಮಾರಿಗೆ 1000 ಗಂಡಸರಿಗೆ 933 ಹೆಣ್ಣು ಮಕ್ಕಳಿದ್ದಾರೆಂದು ಅಧ್ಯಯನಗಳಿಂದ ತಿಳಿದು ಬಂದಿದೆ. ನಮ್ಮ ದೇಶದಲ್ಲಿ ಅನೇಕ ಕಡೆಗಳಲ್ಲಿ ಹೆಣ್ಣುಗಳ ಸಂಖ್ಯೆ ಇನ್ನೂ ಕಡಿಮೆಯಾಗಿದ್ದು ಕಂಡುಬಂದಿದೆ. ಇದಕ್ಕೆ ಕಾರಣ

CPMG/KA/BG-8/2003-05 RNI No. 45577/88

Posted at Basavanagudi P.O. On the 25th of every Month

ಕೇವಲ ಭ್ರೂಣಹತ್ಯೆ ಒಂದೇ ಆಗಿರದಿದ್ದರೂ, ಭ್ರೂಣಹತ್ಯೆ ಪ್ರಮುಖ ಪಾತ್ರ ವಹಿಸುತ್ತದೆಯೆಂದು ಹೇಳಬಹುದಾಗಿದೆ. ಈ ನೈಸರ್ಗಿಕ ಅಸಮತೋಲನೆಯಿಂದ ಅನೇಕ ಸಾಮಾಜಿಕ ಸಮಸ್ಯೆಗಳಾಗುವ ಸಾಧ್ಯತೆ ಇದೆ. ಹೆಣ್ಣು ಶಿಶುವೆಂದು ತಪ್ಪಾಗಿ ತೀರ್ಮಾನಿಸಿ ಅನೇಕ ಬಾರಿ ಗಂಡು ಶಿಶುಗಳ ಗರ್ಭಪಾತವಾಗಿರುವುದೂ ಕಂಡುಬಂದಿದೆ.

ವೈದ್ಯರೇಕೆ ಈ ವಿಧಾನವನ್ನು ಮುಂದುವರೆಸುತ್ತಿದ್ದಾರೆ ?

ವೈದ್ಯಕೀಯ ತಂತ್ರಜ್ಞಾನದ ದುರ್ಬಳಕೆ, ಲಾಭ ತಂದುಕೊಡುತ್ತಿದೆ ! ಈ ದಿನವೂ ಲಾಭ ತಂದುಕೊಡುವ ವ್ಯಾಪಾರ ಇದಾಗಿರುವುದರಿಂದ ಇದನ್ನು ವೈದ್ಯರು ಮುಂದುವರೆಸಿಕೊಂಡು ಹೋಗುತ್ತಿದ್ದಾರೆ. ಆದ್ದರಿಂದ ಅನೇಕ ಅಸಮರ್ಪಕ ಕಾರಣಗಳನ್ನು ನೀಡಲು ಮುಂದಾಗಿದ್ದಾರೆ. ಉದಾ : ಜನಸಂಖ್ಯಾ ನಿಯಂತ್ರಣ, ಅಸಹಾಯಕ ಮಹಿಳೆಗೆ ಸಹಾಯ, ಸಾಮಾಜಿಕ ಒತ್ತಡ, ಗಂಡ ಹೆಂಡಿರ ತೀರ್ಮಾನವನ್ನು ನಾವು ಬದಲಿಸಲು ಸಾಧ್ಯವಿಲ್ಲ ಇತ್ಯಾದಿ.

ಉತ್ತಮ ಶಿಕ್ಷಣ ಪಡೆದ, ಸರಕಾರದ ಮಾನ್ಯತೆ ಪಡೆದ, ತಜ್ಞ ಸ್ತ್ರೀ ವೈದ್ಯರು ಸ್ತ್ರೀ ಭ್ರೂಣಹತ್ಯೆ ಮಾಡಲು ಮುಂದಾಗಿದ್ದಾರೆ. ವೈದ್ಯಕೀಯ ವೃತ್ತಿ ವ್ಯಾಪರೀಕರಣಗೊಂಡಿದೆ. ಈ ಬೆಳವಣಿಗೆ ಕೆಲವರಿಗೆ ಚಿಂತೆ ಉಂಟುಮಾಡಿದ್ದರಿಂದ ಅದನ್ನು ಹತೋಟಿಯಲ್ಲಿ ತರುವ ಪ್ರಯತ ಜಾರಿಗೆ ಬಂತು. ಇದರಿಂದಾಗಿ ಸರ್ಕಾರ ವೈದ್ಯಕೀಯ ಗರ್ಭಪಾತ ಕಾನೂನನ್ನು 1971ರಲ್ಲಿ ಅನುಷ್ಠಾನಕ್ಕೆ ತಂದಿತು. ಆದರೂ ಹೆಣ್ಣು ಗರ್ಭಪಾತಗಳು ನಿರಂತರವಾಗಿ ಸಾಗಿದುದರಿಂದ ಹೆಣ್ಣು ಗರ್ಭಪಾತವನ್ನು ನಿಷೇಧಿಸಿ ಕಾನೂನನ್ನು ತರಲಾಯಿತು (1994). ಆದರೂ ಹೆಣ್ಣು ಗರ್ಭಪಾತ ನಿಲ್ಲಿಸಿಲ್ಲ! 2001ರಲ್ಲಿ ಅಲ್ಟ್ರಾಸೌಂಡ್ ಯಂತ್ರಗಳ ನೋಂದಣಿ ಮಾಡಿಸಲು ಕರೆ ನೀಡಲಾಯಿತು. ರಾಜ್ಯ ಜಿಲ್ಲಾ ಮಟ್ಟದಲ್ಲಿ ಜಾಗೃತಿ ಸಮಿತಿಗಳ ರಚನೆಯಾಗಿ ಸರ್ಕಾರಕ್ಕೆ ಕ್ರಿಯಾ ವರದಿ ಸಲ್ಲಿಸಲು ಒತ್ತಾಯಿಸಲಾಯಿತು.

ಸರ್ವೋಚ್ಚ ನ್ಯಾಯಾಲಯ, ಇತ್ತೀಚೆಗೆ ಎಚ್ಚೆತ್ತುಕೊಂಡು ಕ್ರಿಯಾಶೀಲವಾಗಿದೆ. ವೈದ್ಯಕೀಯ ಕೌನ್ಸಿಲ್ ಈ ವೈದ್ಯರುಗಳ ಮೇಲೆ ಛೀಮಾರಿ ಹಾಕಿದೆ. ಜನಸಾಮಾನ್ಯರು ಜನಜಾಗೃತಿ ಕಾರ್ಯಕ್ರಮಗಳಲ್ಲಿ ಭಾಗವಹಿಸ ಬೇಕು. ಕೆಲವರೇ ಈ ವಿಷಯಗಳನ್ನು ಬದಲಿಸಲಾಗದು ಆದರೆ ಇವುಗಳನ್ನು ಬದಲಿಸುವ ಅಗತ್ಯತೆ ಇದೆ. ಹೆಣ್ಣು ಭ್ರೂಣ ಹತ್ಯೆ ಮುಂದುವರೆಸಿಕೊಂಡು ಹೋಗುತ್ತಿರುವ ವೈದ್ಯರಿಗೆ ಜನರೇ ಎಚ್ಚರಿಕೆ ಕೊಡಲು ಸಾಧ್ಯವೇ ?

"Achala" 108, Skyline Surabhi,
14 - P , Vidyapeeta Road,
BSK III Stage,
Bangalore - 560 085

To :

Smt/Sri